ಐಕ್ಯರಂಗ

(ವಾರ ಪತ್ರಿಕೆ)

ಭಾರತ ಕಮ್ಯೂನಿಸ್ಟ್ ಪಕ್ಷ [ಮಾರ್ಕ್ಸ್‌ವಾದಿ] ಕರ್ನಾಟಕ ರಾಜ್ಯ ಸಮಿತಿಯ ಮುಖಪತ್ರಿಕೆ

ಸಂಪುಟ 5 | ಸಂಚಿಕೆ 29 | ಜುಲೈ 17, 1983 | ಬೆಲೆ 60 ಪೈಸೆ

ಪಶ್ಚಿಮ ಬಂಗಾಳದಲ್ಲಿ:

ಕಾಂಗ್ರೈನಿಂದ ೧೪ ಸಿ. ಪಿ. ಐ. (ಎಂ) ಕಾರ್ಯಕರ್ತರ ಕಗ್ಗೊಲೆ ಪೊಲಿಟ್ ಬ್ಯೂರೋ ಖಂಡನೆ

ಪಶ್ಚಿಮ ಬಂಗಾಳದ ಮಾಲ್ಡಾ ಜಿಲ್ಲೆಯ ಚಾಂದಮೋನಿ ಮಲೋಪುರ ಎಂಬ ಗ್ರಾಮದಲ್ಲಿ ಕಾಂಗ್ರೆಸ್ (ಐ) ನ ಗೂಂಡಾಗಳು ಇತ್ತೀಚೆಗೆ ನಡೆಸಿದ ಧಾಳಿಯಲ್ಲಿ ಸಿ.ಪಿ.ಐ. (ಎಂ)ಗೆ ಸೇರಿದ ಹದಿನಾಲ್ಕುಮಂದಿ ಕಗ್ಗೊಲೆಗೀಡಾಗಿದ್ದಾರೆ. ಅನೇಕರು ಗಾಯಗೊಂಡಿದ್ದಾರೆ. 15 ವರ್ಷದ ಬಾಲಕಿಯನ್ನು ಅಪಹರಿಸಲಾಗಿದೆ. ಅಲ್ಲದೆ ನಲವತ್ತೈದು ಗುಡಿಸಲುಗಳನ್ನು ಸುಟ್ಟು ಹಾಕಲಾಗಿದೆ. ಕಾಂಗ್ರೈನ ಈ ಎಲ್ಲಾ ದುಷ್ಕೃತ್ಯಗಳ ಮುಖ್ಯಗುರಿಯಾಗಿದ್ದವರು ಸಿ.ಪಿ.ಐ(ಎಂ)ನ ಜಿಲ್ಲಾ ಸಮಿತಿಯ ಸದಸ್ಯರೂ ಹಾಗೂ ಜಿಲ್ಲಾ ಪರಿಷತ್ ಸದಸ್ಯರಾಗಿ ಹೊಸದಾಗಿ ಆಯ್ಕೆಯಾಗಿದ್ದ ಕಾ। ಅಬ್ದುಲ್ ಬಾರಿ ಅವರು. ಘಟನೆಯಲ್ಲಿ ಕಾ। ಬಾರಿ ಅವರ ಚಿಕ್ಕಪ್ಪ ಮತ್ತು ಅವರ ಇಬ್ಬರು ಮಕ್ಕಳು ಕೊಲೆಯಾಗಿದ್ದಾರೆ. ಅಲ್ಲದೆ ಅವರ 15 ವರ್ಷದ ಮಗಳನು ಅಪಹರಿಸಲಾಗಿದೆ.

ಪ. ಬಂಗಾಳದಲ್ಲಿ ಹಿಂಸೆಯ ವಾತಾವರಣವನ್ನು ಸೃಷ್ಟಿಸಲು ಕಾಂಗ್ರೆಸ್ (ಐ) ವ್ಯವಸ್ಥಿತ ಪ್ರಯತ್ನಗಳನ್ನು ನಡೆಸುತ್ತಿದೆ. ಇತ್ತೀಚಿನ ಪಂಚಾಯತ್ ಚುನಾವಣೆಯ ಪ್ರಚಾರ ಸಮಯದಲ್ಲಿ ಸಿ.ಪಿ.ಐ (ಎಂ)ನ 27 ಕಾರ್ಯಕರ್ತರನ್ನು ಕಾಂಗ್ರೈನ ಗೂಂಡಾಗಳು ಕೊಲೆಗೈದಿದ್ದಾರೆ. ಮಾಲ್ಡಾ ಜಿಲ್ಲೆಗೆ ಸಂಬಂಧಿಸಿದಂತೆ ಹೇಳುವುದಾದರೆ ಕೇಂದ್ರ ರೈಲ್ವೇ ಸಚಿವ ಘನಿ ಖಾನ್ ಚೌಧರಿ ಅವರು ಹಿಂಸಾತ್ಮಕ ಪರಿಸ್ಥಿತಿಯನ್ನು ಉಂಟುಮಾಡುವಂತಹ ಉದ್ರೇಕಕಾರೀ ಭಾಷಣ ಮಾಡುತ್ತಿದ್ದುದನ್ನು ಎಡರಂಗದ ಅಧ್ಯಕ್ಷರು ನೇರವಾಗಿಯೇ ಖಂಡಿಸಿದ್ದರು. ಮಲೋಪುರದಲ್ಲಿ ನಡೆದ ನರಮೇಧವು ಇಂತಹ ಉದ್ರೇಕಕಾರಿ ಭಾಷಣಗಳ ನೇರ ಪರಿಣಾಮಗಳಾಗಿವೆ.

1977ರ ಜೂನ್‌ನಲ್ಲಿ ನಡೆದ ಅಸೆಂಬ್ಲಿ ಚುನಾವಣೆಯಲ್ಲಿ ಅನುಭವಿಸಿದ ಸೋಲು. ಲೋಕಸಭಾ ಚುನಾವಣೆ, ಸ್ಥಳೀಯ ಸಂಸ್ಥೆಗಳಿಗೆ ನಡೆದ ಚುನಾವಣೆ, ಇತ್ತೀಚಿನ ಪಂಚಾಯತ್ ಚುನಾವಣೆಗಳಲ್ಲಿ ಬಿದ್ದ ಹೊಡೆತ ಮತ್ತು ಎಡರಂಗದಲ್ಲಿ ಒಡಕುಂಟು ಮಾಡಲು ನಡೆಸಿದ ತೀವ್ರ ಪ್ರಯತ್ನದಲ್ಲಿ ಉಂಟಾದ ವಿಫಲತೆಗಳು ಪ. ಬಂಗಾಲ ಕಾಂಗ್ರೆಸ್ (ಐ) ಪಕ್ಷವು ಕೇಂದ್ರ ನಾಯಕತ್ವದ ಸಂಪೂರ್ಣ ಬೆಂಬಲದೊಂದಿಗೆ ಸಿ. ಪಿ. ಐ. (ಎಂ) ಕಾರ್ಯಕರ್ತರನ್ನು ಮುಗಿಸಿಬಿಡುವ ಹವಣಿಕೆಯಲ್ಲಿ ತೊಡಗಿದೆ.

ಪಶ್ಚಿಮ ಬಂಗಾಳದಲ್ಲಿ ನಡೆದಿರುವ ಹಿಂಸಾಕೃತ್ಯಗಳಿಗೆ ಕಾಂಗ್ರೆಸ್ (ಐ)ನ ಅಖಿಲ ಭಾರತ ನಾಯಕತ್ವ ಮತ್ತು ಪ. ಬಂಗಾಳ ಘಟಕಗಳೇ ಹೊಣೆಯೆಂಬುದಾಗಿ ಪೊಲಿಟ್ ಬ್ಯೂರೋ ಆಪಾದಿಸಿದೆ.

ಪ್ರಜಾಪ್ರಭುತ್ವದ ರಕ್ಷಣೆಯಲ್ಲಿ ಆಸಕ್ತಿಯಿರುವ ಎಲ್ಲರೂ ಕಾಂಗ್ರೈ ಅನುಸರಿಸುತ್ತಿರುವ ರಾಜಕೀಯ ವಿರೋಧಿಗಳ ಮೇಲಿನ ಭಯೋತ್ಪಾದಕ ತಂತ್ರಗಳ ವಿರುದ್ಧ ತಮ್ಮ ಧ್ವನಿಯೆತ್ತಬೇಕೆಂದು ಪೊಲಿಟ್ ಬ್ಯೂರೋ ಕೋರಿದೆ.

ಚುನಾವಣಾ ನಿಧಿಗೆ ಧನಸಹಾಯ ಮಾಡಿರಿ

ರಾಜ್ಯ ಸರ್ಕಾರವು ಈಗಾಗಲೇ ಪ್ರಕಟಿಸಿರುವ ಪ್ರಕಾರ ಪುರಸಭೆಗಳಿಗೆ ಮತ್ತು ನಗರ ಸಭೆಗಳಿಗೆ ಚುನಾವಣೆಗಳು ನಡೆಯುತ್ತವೆ. ಈ ಚುನಾವಣೆ ಒಂದು ಮುಖ್ಯ ರಾಜಕೀಯ ಹೋರಾಟ. ಈ ಚುನಾವಣೆಯಲ್ಲಿ ಭಾರತ ಕಮ್ಯುನಿಸ್ಟ್ ಪಕ್ಷ (ಮಾರ್ಕ್ಸ್‌ವಾದಿ)ದ ಉಮೇದವಾರರು ಹಲವು ಪುರಗಳಲ್ಲಿ ಮತ್ತು ನಗರಗಳಲ್ಲಿ ಸ್ಪರ್ಧಿಸುತ್ತಿದ್ದಾರೆ. ಅವರಿಗೆ ಧನಸಹಾಯ ಅಗತ್ಯವಿದೆ. ಆದ್ದರಿಂದ ರಾಜ್ಯ ಸಮಿತಿಯು ಪುರಸಭಾ ಚುನಾವಣಾ ನಿಧಿಯನ್ನು ಸಂಗ್ರಹಿಸುತ್ತಿದೆ. ತಮ್ಮ ದೇಣಿಗೆಯನ್ನು ಕೂಡಲೇ "ಕಾರ್ಯದರ್ಶಿ, ಭಾರತ ಕಮ್ಯುನಿಸ್ಟ್ ಪಕ್ಷ (ಮಾರ್ಕ್ಸ್‌ವಾದಿ) ಕರ್ನಾಟಕ ರಾಜ್ಯ ಸಮಿತಿ, ಎಲ್ – 56, ಕಾಶಿ ವಿಶ್ವೇಶ್ವರ ಗುಡಿ ರಸ್ತೆ, ಬೆಂಗಳೂರು-560053" ಈ ವಿಳಾಸಕ್ಕೆ ಕಳುಹಿಸಿಕೊಡಬೇಕೆಂದು ವಿನಂತಿ.

ಸಂಪಾದಕೀಯ

ಪುರಸಭೆ, ನಗರಸಭೆ ಚುನಾವಣೆ

ಜನರ ಅಗತ್ಯ ಸಮಸ್ಯೆಗಳಾದ, ಆರೋಗ್ಯ, ರಸ್ತೆ, ಬೀದಿ ದೀಪ, ಶಿಕ್ಷಣ, ಸುಯೋಜಿತ ನಗರಾಭಿವೃದ್ಧಿ, ನೀರು ಪೂರೈಕೆ ಮೊದಲಾದ್ದುವುಗಳ ಸರಿಯಾದ ವ್ಯವಸ್ಥೆಯಾಗಬೇಕಾದರೆ, ಪ್ರಜ್ಞಾವಂತ ಸದಸ್ಯರನ್ನು ಹೊಂದಿದ ನಗರ ಸಭೆ, ನಗರ ಕಾರ್ಪೋರೇಶನ್‌ಗಳು ಅತ್ಯಗತ್ಯ. ಜೊತೆಯಲ್ಲಿಯೇ ಅಂಥ ಸ್ಥಳೀಯ ಸಂಸ್ಥೆಗಳಿಗೆ ಪೂರ್ಣ ಸ್ವಾಯತ್ತ ಅಧಿಕಾರವೂ, ಸರ್ಕಾರದಿಂದ ಆರ್ಥಿಕ ಸಹಾಯವೂ ಬೇಕೇಬೇಕು.

ಮೂವತ್ತೈದು ವರ್ಷಗಳ ಕಾಂಗ್ರೆಸ್ ಆಡಳಿತೆಯಲ್ಲಿ ಸ್ಥಳೀಯ ಸಂಸ್ಥೆಗಳೆಲ್ಲ ರಾಜ್ಯ ಸರ್ಕಾರಗಳ ಕೃಪಾಪೋಷಿತ ಸಂಸ್ಥೆಗಳಾಗಿಯೇ ಉಳಿದಿವೆ. ಕೇಂದ್ರ ರಾಜ್ಯಗಳನ್ನು ಯಾವ ರೀತಿಯಲ್ಲಿ ನೋಡುತ್ತಿದೆ. ರಾಜ್ಯಗಳ ಸಂಪತ್ತನ್ನು ಅಧಿಕಾರಗಳನ್ನು ಮೊಟಕುಗೊಳಿಸಿ, ತನ್ನ ರಾಜಕೀಯವನ್ನು ರಾಜ್ಯ ಸರಕಾರಗಳ ಮೇಲೆ ಯಾವ ರೀತಿ ಹೇರುತ್ತ ಬಂದಿದೆಯೋ, ಸ್ಥಳೀಯ ಸಂಸ್ಥೆಗಳ ಕುರಿತು ರಾಜ್ಯ ಸರ್ಕಾರಗಳೂ ಅದೇ ನೀತಿ, ಧೋರಣೆಗಳನ್ನನುಸರಿಸುತ್ತ ಬಂದಿರುವುದರಿಂದ, ಆರಿಸಿ ಬಂದ ಸದಸ್ಯರೆಲ್ಲ ಸರಿಯಾಗಿ ತಮ್ಮ ಕರ್ತವ್ಯವನ್ನು ನಿರ್ವಹಿಸಿಕೊಂಡು ಹೋಗಲು ಸಾಧ್ಯವಾಗುತ್ತಿಲ್ಲ. ಜನತೆಗಿತ್ತ ಆಶ್ವಾಸನೆಗಳನ್ನು ಪೂರೈಸಲು ವಿಫಲರಾಗಬೇಕಾಗಿ ಬಂದಿದೆ.

ಈ ರೀತಿ ಸ್ಥಳೀಯ ಸಂಸ್ಥೆಗಳ ಅಧಿಕಾರವನ್ನೆಲ್ಲ ಮೊಟಕುಗೊಳಿಸಿ ಸಮಾಧಾನಗೊಳ್ಳದ ಕಾಂಗ್ರೆಸ್ ಸರ್ಕಾರ, ಕಳೆದ ಹಲವಾರು ವರ್ಷಗಳಿಂದ ಪುರಸಭೆ ಮತ್ತು ಕೆಲವು ನಗರ ಸಭೆಗಳ ಚುನಾವಣೆಯನ್ನೂ ನಡೆಸದೆ ಅನ್ಯಾಯ ಮಾಡಿತ್ತು, ಚುನಾಯಿತ ನಗರ ಸಭೆಗಳನ್ನೂ ರದ್ದುಪಡಿಸುತ್ತ ಬಂದಿತ್ತು.

ಜನತಾ ಸರ್ಕಾರ ಅಧಿಕಾರಕ್ಕೆ ಬಂದನಂತರ 18 ವಯಸ್ಸಾದವರಿಗೆಲ್ಲ ಸ್ಥಳೀಯ ಸಂಸ್ಥೆಗಳ ಚುನಾವಣೆಯಲ್ಲಿ ಮತದಾನ ಮಾಡಲು ಅವಕಾಶ ಮಾಡಿಕೊಟ್ಟಿದೆ. ಒಟ್ಟು ಜನಸಂಖ್ಯೆಯಲ್ಲಿ ಶೇಕಡಾ 50ಕ್ಕೂ ಮೇಲ್ಪಟ್ಟಿರುವ ಮಹಿಳೆಯರಿಗೂ ಶೇ. 20ರಷ್ಟು ಸ್ಥಾನಗಳನ್ನು ಮೀಸಲಾಗಿಟ್ಟಿದೆ. ದೊಡ್ಡ ನಗರಗಳಲ್ಲಿ ತಮಗೆ ಹಿನ್ನಡೆಯಾಗಬಹುದೆಂಬ ಅಂಜಿಕೆಯಿಂದ ಕಳೆದ 10 ವರ್ಷಕ್ಕೂ ಮೇಲ್ಪಟ್ಟು ಚುನಾವಣೆಗಳನ್ನು ನಡೆಸದೆ ಬೆಂಗಳೂರು, ಮೈಸೂರು, ಗುಲ್ಬರ್ಗ, ಹುಬ್ಬಳ್ಳಿ ಧಾರವಾಡ ನಗರ ಕಾರ್ಪೋರೇಶನ್‌ಗಳಿಗೂ ಚುನಾವಣೆ ಕಾರ್ಯ ಪ್ರಾರಂಭವಾಗಿದೆ. ಅಧಿಕಾರದ ವಿಕೇಂದ್ರೀಕರಣದ ಸಲುವಾಗಿ ನಗರ ಸಭೆ, ಕಾರ್ಪೋರೇಶನ್‌ಗಳಿಗೆ ಚುನಾವಣೆ ನಡೆಸುತ್ತಿರುವುದು ಸ್ವಾಗತಾರ್ಹ.

ಲೋಕಸಭೆ, ಶಾಸನಸಭೆಗಳಿಗೆ ರಾಜಕೀಯ ಪಕ್ಷಗಳು ತಮ್ಮ ಕಾರ್ಯಕ್ರಮದ ಆಧಾರದಲ್ಲಿ ಸ್ಪರ್ಧಿಸುತ್ತಿರುವಂತೆಯೇ, ನಗರಸಭೆ, ನಗರ ಕಾರ್ಪೋರೇಶನ್‌ಗಳ ಚುನಾವಣೆಗಳಲ್ಲೂ ರಾಜಕೀಯ ಪಕ್ಷಗಳು ಸ್ಪರ್ಧಿಸುವುದು ಅತ್ಯಗತ್ಯ. ಆದರೆ ಕರ್ನಾಟಕದ ಬಹಳಷ್ಟು ಸ್ಥಳೀಯ ಸಂಸ್ಥೆಗಳಲ್ಲಿ ಸಿಪಿಐ(ಎಂ) ಮತ್ತು ಸಿಪಿಐ ಬಿಟ್ಟು ಬೇರೆ ಪಕ್ಷಗಳು ರಾಜಕೀಯ ಕಾರ್ಯಕ್ರಮದ ಆಧಾರದಲ್ಲಿ ಸ್ಪರ್ಧಿಸಲು ಹಿಂದೇಟು ಹಾಕುತ್ತಿರುವುದನ್ನು ನೋಡುತ್ತಲೇ ಬಂದಿದ್ದೇವೆ. ಇದರ ಪರಿಣಾಮವಾಗಿ ಬಹಳಷ್ಟು ಪುರಸಭೆ, ಕಾರ್ಪೋರೇಶನ್‌ಗಳಲ್ಲಿ ಸ್ಪರ್ಧಿಸುವವರೆಲ್ಲ ತಂತಮ್ಮ ಜಾತಿ, ಧರ್ಮ ಹಾಗೆಯೇ ಹಣದ ಪ್ರಭಾವದಿಂದಲೇ ಆರಿಸಿ ಬರುತ್ತಾರೆ. ಆ ರೀತಿ ಆರಿಸಿ ಬಂದ ನಂತರ ಅಧಿಕಾರ ಪಡೆಯುವ ಉದ್ದೇಶದಿಂದ ಗುಂಪುಗಾರಿಕೆಯನ್ನು ಪ್ರೋತ್ಸಾಹಿಸಿ ಸದಸ್ಯರನ್ನೂ ಆಡಳಿತೆಯನ್ನೂ ಭ್ರಷ್ಟಾಚಾರದ ನೆಲೆಬೀಡನ್ನಾಗಿ ಮಾಡುತ್ತಾರೆ. ಹೀಗಾಗಿ ರಾಜಕೀಯ ಪಕ್ಷಗಳ ಹತೋಟಿಯಿಲ್ಲದ ಆಡಳಿತೆ ನಡೆದು ನಾಗರೀಕರ ಸಮಸ್ಯೆಗಳು ಪರಿಹರಿಸಲ್ಪಡದೆ ಸದಸ್ಯರ ಕಚ್ಚಾಟದಲ್ಲಿಯೇ ಕಾಲಕಳೆಯುವಂಥ ಪರಿಸ್ಥಿತಿಗಳನ್ನು ನೋಡುತ್ತಿದ್ದೇವೆ.

ಪಂಚಾಯತಿ ಮತ್ತು ನಗರಸಭೆ, ಕಾರ್ಪೋರೇಶನ್ ಚುನಾವಣೆಗಳಲ್ಲಿ ರಾಜಕೀಯ ತರಬಾರದೆಂಬ ತಪ್ಪು ಅಭಿಪ್ರಾಯವನ್ನು ಕಾಂಗ್ರೆಸ್, ಜನತಾ ಪಾರ್ಟಿಗಳಂತ ಬಂಡವಾಳಶಾಹಿ ಪಕ್ಷಗಳು ಹೊಂದಿವೆ. ಸ್ಥಳೀಯ ಸಂಸ್ಥೆಗಳಲ್ಲಿ ರಾಜಕೀಯ ಅಪಾಯಕಾರಿ ಎಂದು ಅವರ ಭಾವನೆ. ದೇಶದಲ್ಲಿ, ರಾಜ್ಯದಲ್ಲಿ ರಾಜಕೀಯ ಪಕ್ಷಗಳು ಅಧಿಕಾರ ನಡೆಸುತ್ತಿರುವಾಗ ಸ್ಥಳೀಯ ಸಂಸ್ಥೆಗಳ ಮೇಲೂ ಅದರ ಪರಿಣಾಮ ಉಂಟಾಗುತ್ತದೆಂಬುದನ್ನು ಅವರು ಮರೆತಂತೆ ಕಂಡು ಬರುತ್ತದೆ. ಅಥವಾ ಅಧಿಕಾರ ವಿಕೇಂದ್ರೀಕರಣವಾದಾಗ ಸ್ಥಳೀಯ ಪರಿಸ್ಥಿತಿಯ ಆಧಾರದಲ್ಲಿ ತನ್ನ ಪಕ್ಷಕ್ಕೆ ಸೋಲು, ಹಾನಿ ಉಂಟಾಗಬಹುದೆಂಬ ಭೀತಿಯೂ ಇರಬಹುದಾಗಿದೆ, ಆದ್ದರಿಂದ ಸ್ಥಳೀಯ ಸಂಸ್ಥೆಗಳ ಚುನಾವಣೆಯಲ್ಲಿ ರಾಜಕೀಯ ದೂರವಿಡಲು ಇವರು ಅಪೇಕ್ಷಿಸುತ್ತಾರೆ

(8ನೇ ಪುಟ ನೋಡಿ)

ಬರಲಿರುವ ಪುರಸಭೆ, ನಗರಸಭೆಗಳ ಚುನಾವಣೆಯಲ್ಲಿ ಎಡ-ಪ್ರಜಾಪ್ರಭುತ್ವ ಶಕ್ತಿಗಳನ್ನು ಬೆಂಬಲಿಸಿ

ಕೃಷಿ ಕಾರ್ಮಿಕರಿಗೆ ನ್ಯಾಯ ಸಿಗಲಿ

ನಮ್ಮ ದೇಶದ ಗ್ರಾಮಾಂತರ ಪ್ರದೇಶದಲ್ಲಿ ಸಂಕಷ್ಟಕ್ಕೀಡಾಗಿರುವ 5 ಕೋಟಿಗೂ ಮೇಲ್ಪಟ್ಟಿರುವ ಕೃಷಿ ಕಾರ್ಮಿಕರಿಗೆ ಸಂರಕ್ಷಣೆ ದೊರೆತು ಅವರ ಜೀವನದ ಮತ್ತು ಕೆಲಸ ಮಾಡುವ ಪರಿಸ್ಥಿತಿಯಲ್ಲಿ ಸುಧಾರಣೆಯನ್ನುಂಟು ಮಾಡುವಂತೆ, ಮುಂದಿನ ಲೋಕಸಭೆಯಲ್ಲಿ ಸಮಗ್ರ ಕಾನೂನೊಂದನ್ನು ತರುವುದಕ್ಕೆ ತುರ್ತಿನ ಕ್ರಮ ಕೈಗೊಳ್ಳಬೇಕೆಂದು ಅಖಿಲ ಭಾರತ ಕೃಷಿ ಕೂಲಿಗಾರರ ಸಂಘಟನೆಯ ಪ್ರ. ಕಾರ್ಯದರ್ಶಿಯವರಾದ ಕಾ. ಎ. ಕೆ. ಕುಂಜಪ್ಪನ್ ಅವರು ಶ್ರೀಮತಿ ಇಂದಿರಾ ಗಾಂಧಿ ಮತ್ತು ಕಾರ್ಮಿಕ ಮಂತ್ರಿ ವೀರೇಂದ್ರ ಪಾಟೀಲರಿಗೆ ವಿನಂತಿ ಮಾಡಿಕೊಂಡಿದ್ದಾರೆ.

ಕೃಷಿ ಕಾರ್ಮಿಕರ ಸಮಸ್ಯೆ ರಾಷ್ಟ್ರೀಯ ಪ್ರಶ್ನೆಯಾಗಿದೆ. ರಾಷ್ಟ್ರದ ಒಳಿತಿಗಾಗಿಯೇ ಈ ಜನಾಂಗದ ಅಭಿವೃದ್ಧಿಯಾಗುವುದು ಅತ್ಯಗತ್ಯ.

ಅಸಂಘಟಿತ ಗ್ರಾಮಾಂತರ ಕಾರ್ಮಿಕರ ಪರವಾಗಿರುವ ಕೇಂದ್ರ ಸ್ಥಾಯಿ ಸಮಿತಿಯು 1980ರಲ್ಲಿಯೇ ಕೃಷಿ ಕಾರ್ಮಿಕರ ಕುರಿತು ಒಂದು ಮಸೂದೆಗೆ ಮಂಜೂರಿ ನೀಡಿತ್ತು. 1980ರಲ್ಲಿಯೇ ಲೋಕಸಭೆಯಲ್ಲಿ ಒಬ್ಬ ಖಾಸಗಿ ಸದಸ್ಯ ಮಂಡಿಸಿದ ನಿರ್ಣಯದ ಕುರಿತು ಚರ್ಚೆ ನಡೆಯುವಾಗಲೇ ಕೇಂದ್ರ ಸರಕಾರ ಈ ಸಮಸ್ಯೆಗೆ ಪರಿಹಾರ ಒದಗಿಸುವುದಾಗಿ ವಚನಕೊಟ್ಟಿತ್ತು. ಆಗ ಕೇಂದ್ರದಲ್ಲಿ ಕಾರ್ಮಿಕ ಮಂತ್ರಿಯಾಗಿದ್ದ ಟಿ. ಅಂಜಯ್ಯನವರು ಕೃಷಿ ಕಾರ್ಮಿಕರ ಸಲುವಾಗಿ ಪ್ರತ್ಯೇಕ ಮಸೂದೆಯೊಂದನ್ನು ಮಂಡಿಸುವುದಾಗಿ ಹೇಳಿದ್ದರು.

ಸರ್ಕಾರ ಆಶ್ವಾಸನೆ ಕೊಟ್ಟು ಮೂರು ವರ್ಷಗಳಾದರೂ ಕೂಡ, ಅದನ್ನು ಪೂರೈಸಲು ಯಾವ ಕ್ರಮ ಕೈಗೊಂಡಿಲ್ಲ.

ಈಗ ಭಾರತ ಸರ್ಕಾರ ಹೊಸ 20 ಅಂಶಗಳ ಕಾರ್ಯಕ್ರಮದ ಮೂಲಕ ಶೀಘ್ರ ಸಮಸ್ಯೆ ಪರಿಹರಿಸುತ್ತೇವೆಂದು ಹೇಳಿಕೊಳ್ಳುತ್ತಿದೆ. ನಮ್ಮ ದೇಶದಲ್ಲಿರುವ ಐದುಕೋಟಿ ಕೃಷಿ ಕಾರ್ಮಿಕರಿಗೆ ಯಾವ ರೀತಿಯ ಸಂರಕ್ಷಣೆ ಇಲ್ಲೆಂದು ಅವರೆಲ್ಲರೂ ದಬ್ಬಾಳಿಕೆ ಮತ್ತು ಸುಲಿಗೆಗೆ ತುತ್ತಾಗಿದ್ದಾರೆಂಬ ಸಂಗತಿಯನ್ನು ಎಲ್ಲರೂ ಒಪ್ಪಿಕೊಳ್ಳುತ್ತಾರೆ. ಕೃಷಿ ಕಾರ್ಮಿಕರ ರಕ್ಷಣೆಯ ಸಲುವಾಗಿ ಕೇಂದ್ರ ಸರ್ಕಾರ ಯಾವುದೇ ಕ್ರಮ ಕೈಗೊಳ್ಳದಿರುವಾಗ, 20 ಅಂಶಗಳ ಕಾರ್ಯದ ಮೂಲಕ ಅವರ ಪರಿಸ್ಥಿತಿಯನ್ನು ಸುಧಾರಿಸುತ್ತೇವೆಂದು ಹೇಳಿದರೆ ನಂಬುವುದು ಹೇಗೆ.

ಕೇಂದ್ರ ಸರ್ಕಾರದ ಮಸೂದೆ ಕೆಳಗೆ ನಮೂದಿಸಿದ ಅಂಶಗಳನ್ನೊಳಗೊಂಡಿರಬೇಕು :-

ಕಾರ್ಮಿಕ ಸಂಘಟನೆಯ ಹಕ್ಕು, ಭದ್ರತೆ ಮತ್ತು ಉದ್ಯೋಗ, ಕನಿಷ್ಟ ವೇತನ, ಕೆಲಸದ ಪರಿಸ್ಥಿತಿಯನ್ನು ತಕರಾರುಗಳಲ್ಲಿ ಜಖಂ ಮತ್ತು ಮೃತರಾದಾಗ ಪರಿಹಾರ, ಪ್ರಾವಿಡೆಂಟ್ ಫಂಡ್ ಮುಂತಾದ ಸಮಸ್ಯೆಗಳಿಗೆಲ್ಲ ಪರಿಹಾರ ಕಂಡು ಹಿಡಿಯುವ ವ್ಯವಸ್ಥೆ, ಎಲ್ಲರಿಗೂ ನೌಕರಿ ಭದ್ರತೆಯ ಯೋಜನೆ ಮತ್ತು ನೌಕರಿಯಿಲ್ಲದಿರುವಾಗ ನಿರುದ್ಯೋಗ ಭತ್ತೆ; 55 ವರ್ಷಕ್ಕೆ ಮೇಲ್ಪಟ್ಟ ಕೃಷಿ, ಕಾರ್ಮಿಕರಿಗೆಲ್ಲ ನಿವೃತ್ತಿ ವೇತನ, ಹೆಣ್ಣು ಮಕ್ಕಳು ಕೆಲಸದಲ್ಲಿದ್ದಾಗ ಅವರ ಕೂಸುಗಳ ರಕ್ಷಣೆಗೆ ವ್ಯವಸ್ಥೆ ಮತ್ತು ಔಷಧಪೂರೈಕೆ ಮುಂತಾದವು. ಕೃಷಿ ಕಾರ್ಮಿಕರ ಸಲುವಾಗಿಯೇ ಪ್ರತ್ಯೇಕ ಕಾರ್ಮಿಕ ಶಾಖೆ, ಕಾರ್ಮಿಕ ಮೇಲ್ವಿಚಾರಕ ಅಧಿಕಾರಿಗಳು.

ಅಖಿಲ ಭಾರತ ಕೃಷಿ ಕಾರ್ಮಿಕ ಸಂಘವು ಇನ್ನಿತರ ಪ್ರಜಾಸತ್ತಾತ್ಮಕ ಮತ್ತು ಕೃಷಿ ಕಾರ್ಮಿಕರ ಸಂಘಗಳ ಜೊತೆ ಈ ಬೇಡಿಕೆಗಳ ಆಧಾರದಲ್ಲಿ ಮುಂದೆ ತೀವ್ರ ಹೋರಾಟ ನಡೆಸಲು ತೀರ್ಮಾನಿಸಿರುವುದಲ್ಲದೆ ಕೂಡಲೆ ಕೇಂದ್ರ ಸರ್ಕಾರ ಕೃಷಿ ಕಾರ್ಮಿಕರಿಗೆ ಸಂಬಂಧಿಸಿದಂತೆ ಕಾನೂನು ತರಲು ತೀವ್ರವಾಗಿ ಆಗ್ರಹಪಡಿಸಿರುತ್ತದೆ.

ಬೆಲೆಯೇರಿಕೆ ವಿರುದ್ಧ ಹೋರಾಡಲು ಸಿ. ಐ. ಟಿ. ಯು. ಕರೆ

೧೧-೮-೧೯೮೩ರಂದು ಬೆಲೆ ಏರಿಕೆ ವಿರೋಧಿ ದಿನಾಚರಣೆ

ಜನರು ಉಪಯೋಗಿಸುತ್ತಿರುವ ದೈನಂದಿನ ಬಳಕೆಯ ಅತ್ಯವಶ್ಯಕ ವಸ್ತುಗಳ ಬೆಲೆ ಕಳೆದ ಕೆಲವು ತಿಂಗಳಿಂದ ಗಗನಕ್ಕೇರುತ್ತಲೇ ಇದೆ. ದುಡಿಯುವ ಕಾರ್ಮಿಕರಿಗೂ, ಮಧ್ಯಮ ವರ್ಗದವರಿಗೂ ಸಿಗುವ ಸಂಬಳದಲ್ಲಿ ಜೀವನ ನಡೆಸುವುದೇ ಅಸಾಧ್ಯವಾಗಿದೆ, ಬೆಲೆ ಏರಿಕೆಗೆ ಕೇಂದ್ರ ಸರಕಾರದ ಆರ್ಥಿಕ ನೀತಿಯಷ್ಟೇ, ರಾಜ್ಯ ಸರಕಾರದ ಅಸಮರ್ಪಕ ಖರೀದಿ ಮತ್ತು ವಿತರಣಾ ಪದ್ಧತಿಯೂ ಕಾರಣಭೂತವಾಗಿದೆ. ಸರಕಾರ ತನ್ನ ನೀತಿಯಲ್ಲಿ ಬದಲಾವಣೆಯನ್ನುಂಟುಮಾಡಿ, ಸಾರ್ವಜನಿಕ ವಿತರಣಾ ವ್ಯವಸ್ಥೆಯ ಮೂಲಕ ಸರಕಾರದವರು ಅಗ್ಗದರದಲ್ಲಿ ಅತ್ಯಾವಶ್ಯಕ ವಸ್ತುಗಳನ್ನು ವಿತರಣೆ ಮಾಡಬೇಕೆಂದು ಒತ್ತಾಯಿಸಲು 11-8-83ರಂದು ರಾಜ್ಯಾದ್ಯಂದ ಸರಕಾರಿ ಕಛೇರಿಗಳ ಮುಂದೆ ಸಾಮೂಹಿಕ ಪ್ರದರ್ಶನ, ಧರಣಿ ಸತ್ಯಾಗ್ರಹ, ಪಿಕೆಟಿಂಗ್, ಘೇರಾವ್ ಮುಂತಾದ ಕಾರ್ಯಕ್ರಮಗಳನ್ನು ನಡೆಸಬೇಕೆಂದು ಸಿ. ಐ. ಟಿ. ಯು. ಕರೆ ಕೊಡುತ್ತದೆ.

೨೬-೭-೮೩ರಂದು ಕಾರ್ಮಿಕರ ಬೇಡಿಕೆ ದಿನಾಚರಣೆ

ಸಿ.ಐ.ಟಿ.ಯು. ಸಂಘಗಳೊಡನೆ ಮಾತುಕತೆ ನಡೆಸುವುದಿಲ್ಲ. ಅವುಗಳಿಗೆ ಮನ್ನಣೆ ನೀಡುವುದಿಲ್ಲ ಎಂಬ ಕೆಲವು ಬಂಡವಾಳಗಾರರ ದುಷ್ಟ ಹಟಮಾರಿ ನಿಲುವು ಬೆಂಗಳೂರಿನ ಐ. ಟಿ. ಸಿ, ವೈಕೋ, ಆಂಧ್ರ ಸ್ಟೀಲ್, ಸದರನ್ ಸ್ಟೀಲ್ ಮೊದಲಾದ ಕಾರ್ಖಾನೆಗಳಿಂದ ಪ್ರಾರಂಭವಾಗಿ ಹುಬ್ಬಳ್ಳಿಯ ಬಿ.ಡಿ.ಕೆ. ಅಲಾಯ್ಸ್ ಕಾರ್ಖಾನೆಯವರೆಗೂ ಮುಟ್ಟಿದೆ. ಕೈಗಾರಿಕಾ ವಿವಾದದಲ್ಲಿ ಕಾರ್ಮಿಕ ಸಚಿವರ ವರ್ತನೆ ಮಾಲೀಕರಿಗೆ ಅನುಕೂಲವಾಗುತ್ತಿದೆ. ಕನಿಷ್ಟ ಕೂಲಿಯ ಕಾಯಿದೆ ಅನ್ವಯವಾಗುವ ಕೈಗಾರಿಕೆಗಳ ಲಕ್ಷಾಂತರ ಕಾರ್ಮಿಕರಿಗೆ ಕನಿಷ್ಟ ಕೂಲಿ ಹೆಚ್ಚಿನ ದರದಲ್ಲಿ ನಿರ್ಣಯವಾಗದೆ ಕಾರ್ಮಿಕರು ಅನ್ಯಾಯಕ್ಕೆ ಗುರಿಯಾಗಿದ್ದಾರೆ. ಇದರಿಂದ ಬಂಡವಾಳದಾರರಿಗೆ ಕೋಟ್ಯಾಂತರ ರೂಪಾಯಿ ಉಳಿತಾಯವಾಗುತ್ತಿದೆ.

ಕೈಗಾರಿಕಾ ವಿವಾದಗಳಲ್ಲಿ ಪೋಲೀಸರ ಕೈವಾಡ ನಡೆಯುತ್ತಿದ್ದು ರಾಜ್ಯಾದ್ಯಂತ ಹಲವಾರು ಪ್ರದೇಶಗಳಲ್ಲಿ ನಡೆಯುತ್ತಿರುವ ಕಾರ್ಮಿಕರ ಬೇಡಿಕೆಗಳನ್ನು ಈಡೇರಿಸಬೇಕೆಂದು ಸರಕಾರದ ಮೇಲೆ ಒತ್ತಾಯ ತರಲು 26-7-83ರಂದು ಎಲ್ಲ ಕಾರ್ಮಿಕರ ಸಂಘಗಳು ಸಾಮೂಹಿಕ ಪ್ರದರ್ಶನ, ಧರಣಿ ನಡೆಸಬೇಕೆಂದು ಸಿ.ಐ.ಟಿ.ಯು ಕರೆಕೊಟ್ಟಿದೆ.

೧-೯-೮೩ರಂದು ವಿಶ್ವಶಾಂತಿ ದಿನಾಚರಣೆ

ಯುದ್ಧದ ಅಪಾಯವು ಹೆಚ್ಚುತ್ತಿರುವ ಹಿನ್ನೆಲೆಯಲ್ಲಿ 1-9-1983ರಂದು ಜಗತ್ತಿನಾದ್ಯಂತ ಶಾಂತಿ ದಿನವನ್ನು ಆಚರಿಸಬೇಕೆಂದು ಡಬ್ಲ್ಯು. ಎಫ್.ಟಿ.ಯು. ಕರೆಕೊಟ್ಟಿದೆ. ದೇಶಾದ್ಯಂತ ಅಂದು ಶಾಂತಿ ದಿನವನ್ನು ಆಚರಿಸಬೇಕೆಂದು ಸಿ. ಐ. ಟಿ. ಯು. ಕರೆ ಕೊಟ್ಟಿದೆ. ಎಲ್ಲ ಸಿ. ಐ. ಟಿ. ಯು. ಸಂಘಗಳು ಇತರ ಎಲ್ಲ ಯುದ್ಧ ವಿರೋಧಿ ಸಂಘಗಳೊಡನೆ ಸೇರಿ 1-9-83ರಂದು ಶಾಂತಿ ದಿನವನ್ನು ಯಶಸ್ವಿಯಾಗಿ ಆಚರಿಸಬೇಕೆಂದು ಸಿ. ಐ. ಟಿ. ಯು. ಕೇಳಿಕೊಂಡಿದೆ.

21-8-1983ರಂದು ನವದೆಹಲಿಯಲ್ಲಿ ಕಾರ್ಮಿಕ ಸಂಘಗಳ ರಾಷ್ಟ್ರೀಯ ಆಂದೋಲನ ಸಮಿತಿಯ 2ನೆಯ ಅಖಿಲ ಭಾರತ ಸಮಾವೇಶವು ನಡೆಯಲಿದ್ದು ಈ ಸಮಾವೇಶಕ್ಕೆ ನಮ್ಮ ರಾಜ್ಯದಿಂದ ಕನಿಷ್ಟ ಪಕ್ಷ ನಲವತ್ತು ಪ್ರತಿನಿಧಿಗಳನ್ನಾದರೂ ಕಳುಹಿಸಬೇಕೆಂದು ನಿರ್ಧರಿಸಲಾಗಿದೆ. ಎಲ್ಲಾ ಜಿಲ್ಲಾ ಘಟಕಗಳು ಪ್ರತಿನಿಧಿಗಳನ್ನು ಕಳುಹಿಸುವ ವ್ಯವಸ್ಥೆ ಮಾಡಬೇಕು.

ರಾಜ್ಯದಲ್ಲಿ ಹಲವಾರು ಪುರಸಭೆ ಹಾಗೂ ನಗರ ಕಾರ್ಪೊರೇಶನ್‌ಗಳಿಗೆ ಚುನಾವಣೆ ನಡೆಯುತ್ತಿದ್ದು, ಈ ಚುನಾವಣೆಯಲ್ಲಿ ಕಾಂಗ್ರೆಸ್(ಐ)ನ್ನು ಸೋಲಿಸಿ ಪ್ರಜಾಪ್ರಭುತ್ವ ಶಕ್ತಿಗಳನ್ನು ಗೆಲ್ಲಿಸಬೇಕು.

ಸಿ. ಐ. ಟಿ. ಯು. ಸಂಘಗಳು ಅಸ್ಸಾಂನಲ್ಲಿ ನಡೆಯುತ್ತಿರುವ ವಿಚ್ಛಿದ್ರಕಾರಿ, ಪ್ರತ್ಯೇಕತಾವಾದಿ ಚಳವಳಿಯ ಬಗ್ಗೆ ನಿಜಸಂಗತಿಗಳನ್ನು ಕಾರ್ಮಿಕರ ನಡುವೆ ಸತತವಾಗಿ ಪ್ರಚಾರ ಮಾಡಬೇಕು. ದೇಶದ ಐಕ್ಯತೆಯನ್ನು ಕಾಪಾಡುವ ಮಹತ್ಕಾರ್ಯದಲ್ಲಿ ಕಾರ್ಮಿಕ ಸಂಘಗಳು ಮುಖ್ಯ ಪಾತ್ರ ವಹಿಸುವ ಅಗತ್ಯವನ್ನು ಕಾರ್ಮಿಕರಿಗೆ ಮನಗಾಣಿಸಬೇಕು ಎಂದು ಸಿ.ಐ.ಟಿ.ಯು. ಎಲ್ಲ ಕಾರ್ಮಿಕ ಸಂಘಗಳಿಗೆ ಕರೆ ನೀಡಿದೆ.

ದಾಂಡೇಲಿ :

ಪ್ಲೈವುಡ್ ಕಾರ್ಮಿಕರ ಒಪ್ಪಂದ ಜಾರಿಯಾಗಲಿ

ಸ್ಥಳೀಯ ಪ್ಲೈವುಡ್ ಕಾರ್ಮಿಕರು ಐದು ಅಂಶದ ಬೇಡಿಕೆಯನ್ನಿಟ್ಟು ಹೋರಾಟದ ಮೊದಲನೆಯ ಹೆಜ್ಜೆಯನ್ನಾಗಿ 9ನೇ ಫೆಬ್ರವರಿ 83 ರಿಂದ ಸರತಿಯ ಅನ್ನ ಸತ್ಯಾಗ್ರಹವನ್ನು ಪ್ರಾರಂಭಿಸಿದ್ದರು. ಸಹಾಯಕ ಕಾರ್ಮಿಕಾಧಿಕಾರಿಗಳು, ತಮ್ಮ ಆಫೀಸಿನಲ್ಲಿ 14 ರಂದು ಕನ್ಸಿಲೇಶನ್ ಮೀಟಿಂಗನ್ನು ಕರೆದಿದ್ದರು. ಆ ದಿನ ಯಾವುದೇ ನಿರ್ಣಯ ಬರಲಿಲ್ಲ. ನಂತರ ಮತ್ತೆ ದಿನಾಂಕ : 16 ಮತ್ತು 17 ರಂದು ಎರಡು ದಿನ ಕನ್ಸಿಲೇಶನ್ ನಡೆಯಿತು. ದಿ : 17ರ ರಾತ್ರಿ 9 ಗಂಟೆಗೆ ಒಂದು ನಿರ್ಣಯಕ್ಕೆ ಬರಲಾಯಿತು

1) ಹಳಿಯಾಳ ಕೋರ್ಟಿನಲ್ಲಿ 1981-82ರ ಹೋರಾಟದಲ್ಲಿ ಕಾರ್ಮಿಕರ ಮೇಲೆ ಮೇನೆಜ್‌ಮೆಂಟಿನ ಪ್ರೇರಣೆಯಿಂದ ಹಾಕಲಾದ ನಾಲ್ಕು ಕೇಸನ್ನು ಆದಷ್ಟು ಬೇಗನೇ ಹಿಂತೆಗೆದುಕೊಳ್ಳುತ್ತೇವೆ ಎಂದು ಸಹಾಯಕ ಕಾರ್ಮಿಕಾಧಿಕಾರಿಯವರ ಮುಂದೆ ಒಪ್ಪಂದ ಮಾಡಿದ್ದರು. ಅದರಲ್ಲಿ ಎರಡು ಕೇಸನ್ನು ವಾಪಸ್ ತೆಗೆದುಕೊಂಡು ಒಂದು ಕೇಸಿನಲ್ಲಿ 153 ಜನ ಕಾರ್ಮಿಕರಿದ್ದರು. ಆದ್ದರಿಂದ ಕಂಪನಿಗೆ ಉತ್ಪಾದನೆಯಲ್ಲಿ ಬಹಳಷ್ಟು ನಷ್ಟವಾಗುತ್ತಿತ್ತು. ಆದ್ದರಿಂದ ಆ ಕೇಸನ್ನು ಮೊದಲು ಹಿಂತೆಗೆದುಕೊಂಡರು. ಇನ್ನೂ ಎರಡು ಕೇಸಿನ ಬಗ್ಗೆ ಯಾವುದೇ ತರಹದ ವಿಚಾರ ಮಾಡಲು ಮ್ಯಾನೇಜ್‌ಮೆಂಟ್ ತಯಾರಿಲ್ಲ.

2) 1981-82ರ ಹೋರಾಟದಲ್ಲಿ ಅಕ್ರಮವಾಗಿ ಮೂರು ಜನರನ್ನು ಕೆಲಸದಿಂದ ವಜಾ ಮಾಡಿದ್ದರು. ಅದರಲ್ಲಿ ಸಂಘದ ಸಹಕಾರ್ಯದರ್ಶಿಯಾದ, ಅಕ್ರಮ್ ಎ. ಖಾನ್, ರಾಜಾರಾವ್ ಮತ್ತು ಕೆ. ಟಿ. ನಾಯ್ಕ ಇವರನ್ನು ಒಂದು ತಿಂಗಳಿನ ಒಳಗೆ ಕೆಲಸಕ್ಕೆ ಸೇರಿಸಿಕೊಳ್ಳುತ್ತೇವೆ ಮತ್ತು ಪರಿಹಾರಧನವಾಗಿ 800 ರೂ ಕೊಡುತ್ತೇವೆ ಎಂದಿದ್ದರು. ಸಂಘದ ಪತಿಯಿಂದ ಎರಡು ನೋಟಿಸ್ ಕೊಟ್ಟರೂ ಸಹ ಅದಕ್ಕೆ ಇನ್ನೂವರೆಗೆ ಉತ್ತರವಿಲ್ಲ.

3) ಮೊದಲಿನ ಹಾಗೆ ಕಾರ್ಮಿಕರಿಗೆ ಸುಳ್ಳು ಅಪಾದನೆಯನ್ನು ಹಾಕಿ ಚಾರ್ಜಶೀಟನ್ನು ಕೊಡುತ್ತಿದ್ದಾರೆ.

ಉಚ್ಚ ಅಧಿಕಾರಿಗಳು ಕಂಪನಿಗೆ ಭೇಟಿಕೊಡಲು ಬಂದಾಗ ಎಲ್ಲ ಕಂಟ್ರಾಕ್ಟ ಕಾರ್ಮಿಕರನ್ನು ಮೊದಲು ಮನೆಗೆ ತಳ್ಳುತ್ತಾರೆ. 20ಮೇ 83 ರಂದು ಫ್ಯಾಕ್ಟರಿ ಇನ್ಸ್‌ಪೆಕ್ಟರ್‌ರಾದ ಅಶ್ವತ್‌ನಾರಾಯಣ ಇವರು ಕಂಪನಿಗೆ ಭೇಟಿಕೊಡಲು ಬಂದ ವೇಳೆಯಲ್ಲಿ ಹಿಂದಿನಂತೆ ಕಂಟ್ರಾಕ್ಟ ಕಾರ್ಮಿಕರನ್ನು ಮನೆಗೆ ತಳ್ಳಿದರು. ಸ್ವಲ್ಪ ಹೊತ್ತಿನ ನಂತರ ಕಾರ್ಮಿಕರಿಗೆ ಸುದ್ದಿ ತಿಳಿಯಿತು. ಗೇಟಿನ ಮುಂದೆ ಬಂದು ನಿಂತರು. ಅಶ್ವತ್ ನಾರಾಯಣ್ ಇವರು ಫ್ಯಾಕ್ಟರಿಯ ಒಳಗೆ ಇದ್ದರು. ಅವರು ಹೊರಗೆ ಬಂದನಂತರ ಅವರಿಗೆ ಘೇರಾವ್ ಮಾಡಿ ನಿಲ್ಲಿಸಿದರು. 2 ತಾಸಿನವರೆಗೂ ಬಿಡಲಿಲ್ಲ. ಕಂಪನಿಯವರ ಕಡೆ ವಿಚಾರಿಸಿ, ಉಚ್ಚ ಅಧಿಕಾರಿಗಳು ಕಂಪನಿಗೆ ಭೇಟಿ ಕೊಡಲು ಬಂದ ವೇಳೆಯಲ್ಲಿ ಕಂಟ್ರಾಕ್ಟ ಕಾರ್ಮಿಕರನ್ನು ಏಕೆ ಹೊರಗೆ ತಳ್ಳುತ್ತೀರಿ ಮತ್ತು ಇ.ಎಸ್.ಐ. ರಜೆಯನ್ನು ಮತ್ತು ಪ್ರಾವಿಡೆಂಟ್ ಫಂಡ್ ಈ ಎಲ್ಲ ಸೌಲಭ್ಯಗಳ ಬಗ್ಗೆ ವಿಚಾರಿಸಿ ಎಂದು ಹಟ ಹಿಡಿದರು. ಆಗ ಅಶ್ವತ್‌ನಾರಾಯಣ ಇವರು 15 ದಿನಗಳ ಒಳಗೆ ಈ ಎಲ್ಲ ಪರಿಹಾರ ಸಿಗುವ ಹಾಗೆ ಮಾಡುತ್ತೇನೆ ಎಂದಿದ್ದರು. ಆದರೆ ಇನ್ನುವರೆಗೂ ಯಾವುದೇ ಪರಿಹಾರ ಕಂಡು ಬರಲಿಲ್ಲ. ಆ ವೇಳೆಯಲ್ಲಿ ಸಂಘದ ಅಧ್ಯಕ್ಷರಾದ ಕಾಂ. ಪಿ. ಜಿ. ಕೆ. ನಾಯರ್ ಇವರು ಇದ್ದರು, ಈ ಎಲ್ಲ ಕಾರ್ಮಿಕರು ಸಿ.ಐ.ಟಿ.ಯು ಸಂಘಟನೆಯ ಅಡಿಯಲ್ಲಿದ್ದಾರೆ.

ಡಿ. ವೈ. ಎಫ್. ಐ. ಸಾಂಸ್ಕೃತಿಕ ತಂಡದ ರಚನೆ

ಬೆಂಗಳೂರು ಜಿಲ್ಲಾ ಮಟ್ಟದಲ್ಲಿ ಡಿ.ವೈ.ಎಫ್.ಐ.ನ ಸಾಂಸ್ಕೃತಿಕ ತಂಡವೊಂದನ್ನು 'ಅಸ್ತಿತ್ವಕ್ಕೆ ತರಲಾಗಿದೆ. ಈ ತಂಡದ ಮೂಲಕ ಪ್ರಗತಿಪರ, ಕ್ರಾಂತಿಕಾರಿ ಗೀತೆಗಳು ಹಾಗೂ ಬೀದಿ ನಾಟಕಗಳನ್ನು ಪ್ರದರ್ಶಿಸಲಾಗುತ್ತಿದೆ.

12-7-83 ಸಂಜೆ ಇನ್ಸ್ಟಿಟ್ಯೂಟ್ ಆಫ್ ಇಂಜಿನಿಯರ್ಸ್ ಹಾಲಿನಲ್ಲಿ ಕರ್ನಾಟಕ ಪ್ರಗತಿಪರ ಆರ್ಟ್ಸ್ ಕ್ಲಬ್ (ಕೆ. ಆರ್. ಪುರಂ) ನ ಆಶ್ರಯದಲ್ಲಿ ಏರ್ಪಡಿಸಲಾಗಿದ್ದ ಸಮಾರಂಭದಲ್ಲಿ, ಶ್ರೀಮಾನ್ ನಾ. ಶ್ರೀನಿವಾಸ್ ಅವರ ರಚನೆ ' ಕನಸಿನವರು ' ಎಂಬ ನಾಟಕವನ್ನು ಸಮುದಾಯದ ಕಾಂ॥ ಬಸವಲಿಂಗಯ್ಯ ಅವರ ನಿರ್ದೇಶನದಲ್ಲಿ ಅಭಿನಯಿಸಲಾಯಿತು. ಈ ನಾಟಕಕ್ಕೆ ಪೂರಕವಾಗಿ ಕಾಂ॥ ಹೆಚ್. ಪಿ. ಜನಕರಾಜ್ ಅವರು ಹಾಡುಗಳನ್ನು ರಚಿಸಿದ್ದಾರೆ.

ಕೇರಳದಲ್ಲಿ:

ಜಾತಿ - ಮತೀಯ ರಾಜಕಾರಣಕ್ಕೆ ಕಾಂಗ್ರೆಸ್ ಜವಾಬ್ದಾರಿ

ಇ. ಎಂ. ಎಸ್. ನಂಬೂದಿರಿಪಾದ್

ಜಾತೀಯ, ಮತೀಯ ದ್ವೇಷಗಳಿಂದ ಕೇರಳ ದೂರವಿತ್ತು. ಆದರೆ ಇತ್ತೀಚೆಗೆ ಕೇರಳದಲ್ಲಿ ಹಿಂದು, ಮುಸ್ಲಿಂ, ಕ್ರಿಶ್ಚಿಯನ್ ಜಾತಿಯವರೂ ಹಾಗೆಯೇ ಉಪ ಜಾತಿ, ಧರ್ಮದವರೆಲ್ಲ ಒಬ್ಬರಿಗೊಬ್ಬರು ಜಗಳವಾಡುತ್ತಿರುವುದಕ್ಕೆ ಎಲ್ಲ ರಾಜಕೀಯ ಪಕ್ಷಗಳೂ ಸರಿಸಮಾನ ಕಾರಣೀಭೂತರಾಗಿದ್ದಾರೆಂದು "ಜಾತೀಯತೆ–ಮತೀಯತೆ ವಿರುದ್ಧ" ಹೋರಾಡುತ್ತೇವೆಂದು ಹೇಳಿಕೊಳ್ಳುತ್ತಿರುವ ಕಾಂಗ್ರೆಸ್ಸಿನವರು ಆರೋಪ ಹೊರಿಸುತ್ತಿದ್ದಾರೆ. ಇದು ಹಾಸ್ಯಾಸ್ಪದ.

ಇತ್ತೀಚೆಗೆ ಕೇರಳದಲ್ಲಿ ಸಂಭವಿಸಿದ ಹಿಂದೂ-ಕ್ರಿಶ್ಚಿಯನ್ ಹಿಂದೂ-ಮುಸ್ಲಿಂ ದಂಗೆಗಳ ಕುರಿತು ಚಿಂತೆ - ವ್ಯಕ್ತಮಾಡಿದವರಲ್ಲಿ, ಕಾಂಗ್ರೆಸ್ಸಿನ ಅಖಿಲಭಾರತ. ರಾಜ್ಯ ಹಾಗೂ ತಾಲೂಕು ಮಟ್ಟದ ಮುಖಂಡರಿರುವುದು ಮತ್ತೂ ಹಾಸ್ಯಾಸ್ಪದವೇ ಆಗಿದೆ.

ಕಾಂಗ್ರೆಯ ಮುಖಂಡತ್ವದ ಸಂಯುಕ್ತ ಪ್ರಜಾಪ್ರಭುತ್ವರಂಗ (ಯು.ಡಿ.ಎಫ್) ಸರಕಾರ ಜಾತೀಯ, ಮತೀಯ ಸ್ವರೂಪದ ಸಾಮೂಹಿಕ ಸಂಘಟನೆಗಳಿಗೂ, ರಾಜಕೀಯಪಕ್ಷಗಳಿಗೂಯಾವುದೇರೀತಿಯ ಪ್ರೋತ್ಸಾಹ ನೀಡಬಾರದೆಂಬ ಬೇಡಿಕೆಯಿತ್ತು, ಯು.ಡಿ.ಎಫ್ ಮಾತ್ರ ಯಾವ ರೀತಿಯಲ್ಲಿಯೂ ಜಾತೀಯತೆಗೆಪ್ರೋತ್ಸಾಹ ನೀಡುತ್ತಿಲ್ಲ, ಮಾರ್ಕ್ಸ್‌ವಾದಿ ಕಮ್ಯುನಿಸ್ಟ ಪಾರ್ಟಿ ಮಾತ್ರ ಅದರಲ್ಲಿ ಕೈವಾಡ ನಡೆಸುತ್ತಿದೆಂಬ ಆರೋಪ ಹೊರಿಸಲಾಗುತ್ತಿದೆ.

ಸತ್ಯದ ವಿಪರ್ಯಾಸ

"ಸಂಯುಕ್ತ ರಂಗದ ರಾಜಕಾರಣ" ಅಥವಾ ಚುನಾವಣೆಯಲ್ಲಿ ಗೆಲ್ಲಬೇಕೆಂಬ ಹವ್ಯಾಸದಿಂದ ಕೂಡಿಕೊಂಡ ಎಲ್ಲ ರಾಜಕೀಯ ಪಕ್ಷಗಳ ಒಕ್ಕೂಟವೇ ಮತೀಯ-ಜಾತೀಯ ಗುಂಪುಗಳಿಗೆ "ಮರ್ಯಾದಿತ"ಸ್ಥಾನ ಒದಗಿಸಿ ಅಂಥ ಶಕ್ತಿಗಳ ಬೆಳವಣಿಗೆಗೆ ಸಹಾಯಕವಾಗಿವೆ ಎಂದು ವಾದ ಮಾಡಲಾಗುತ್ತಿದೆ. ಸಂಯುಕ್ತರಂಗದ ರಾಜಕಾರಣವನ್ನು ರೂಪೀಕರಿಸಿದವರು ಅವಿಭಾಜ್ಯ ಕಮ್ಯುನಿಸ್ಟ್ ಪಾರ್ಟಿಯಾಗಿತ್ತೆಂದೂ, ಅನಂತರ ಅದನ್ನು ಮುಂದಕ್ಕೊಯ್ದು ಪುಷ್ಟೀಕರಿಸಿದವರು ಸಿಪಿಐ (ಎಂ) ಎಂಬ ವಾದವನ್ನು ಮುಂದುವರಿಸಲಾಗುತ್ತಿದೆ.

1967ರಲ್ಲಿ ಸಂಯುಕ್ತರಂಗ ಮಂತ್ರಿ ಮಂಡಲದಲ್ಲಿ, ಸಿಪಿಐ (ಎಂ) ಮುಸ್ಲಿಂ ಲೀಗಿಗೆ ಸ್ಥಾನ ಕೊಟ್ಟಿಲ್ಲವೇ ಎಂದು ಕೇಳಲಾಗುತ್ತಿದೆ. ಈ ರೀತಿ ಮುಸ್ಲಿಂ ಲೀಗಿಗೆ ಅನುಕೂಲತೆದೊರೆತದ್ದು ಕಂಡು ಇತರ ಜಾತೀಯ–ಮತೀಯ ಸಂಘಟನೆಗಳೂ ರಾಜಕೀಯವನ್ನು ಪ್ರವೇಶಿಸಿ ತಮ್ಮವೇ ಆದ "ರಾಜಕೀಯ" ಪಕ್ಷಗಳನ್ನು ಕಟ್ಟಿಕೊಂಡರು, ಆದ್ದರಿಂದ ಕೇರಳದಲ್ಲಿ ಜಾತೀಯ ರಾಜಕಾರಣದ "ಮೂಲಪಾಪ" ಸಿಪಿಐ(ಎಂ) ಪಕ್ಷದ್ದಾಗಿದೆಂಬ ಆರೋಪ.

ಚರಿತ್ರೆಯ ಘಟನೆಗಳನ್ನೆಲ್ಲ ಕಾಳಜಿಯಿಂದ ಪರೀಕ್ಷಿಸಿದರೆ ಇದೆಲ್ಲ ಸತ್ಯಸಂಗತಿಗಳ ವಿದ್ರೂಪವೆಂದು ಸ್ಪಷ್ಟವಾಗುತ್ತದೆ.

ಅವಿಭಾಜಿತ ಕಮ್ಯುನಿಸ್ಟ್‌ಪಾರ್ಟಿಯು ಎಲ್ಲಾ ಜಾತೀಯ, ಧರ್ಮದ ಕಾರ್ಮಿಕ ವರ್ಗದ ಐಕ್ಯತೆಗಾಗಿ ಹೋರಾಡುವ ಪರಂಪರೆಯನ್ನು ಹೊಂದಿತ್ತು. 1964ರಲ್ಲಿ ಕಮ್ಯುನಿಸ್ಟ್ ಪಾರ್ಟಿಯ ವಿಭಜನೆಯ ನಂತರ ಸಿ.ಪಿ.ಐ. (ಎಂ) ಅದೇ ಪರಂಪರೆಯನ್ನು ಮುಂದುವರಿಸಿಕೊಂಡು ಹೋಗುತ್ತಿದೆ. ಆಳುವ ವರ್ಗದ ವಿರುದ್ಧ ಎಲ್ಲ ಧರ್ಮ ಮತ್ತು ಜಾತಿಯ ದುಡಿಯುವ ಜನತೆಯ ಹೋರಾಟನಡೆಸುತ್ತಿರುವಾಗ, ಪಟ್ಟಣ ಮತ್ತು ಗ್ರಾಮಾಂತರ ಪ್ರದೇಶಗಳಲ್ಲಿ ಮೇಲ್ವರ್ಗದ ಜನರ ಸಿಟ್ಟಿಗೊಳಗಾಗಬೇಕಾಯಿತು.

ಕೆಲವೇ ಸಲ ತಾತ್ಕಾಲಿಕವಾಗಿ ಧಾರ್ಮಿಕ, ಜಾತಿಯ ಪಕ್ಷಗಳು ಕಾಂಗ್ರೆಯನ್ನು ಸೋಲಿಸುವ ಸಲುವಾಗಿ ಕಮ್ಯುನಿಸ್ಟರ ಜೊತೆಯಲ್ಲಿಸೇರಿಕೊಂಡಿದ್ದರು. 1967ರಲ್ಲಿದ್ದ ಕಾಂಗ್ರೆಸ್ಸೇತರ ಸಂಯುಕ್ತ ರಂಗದಲ್ಲಿ, ಮುಸ್ಲಿಂಲೀಗ್, ಸಿಪಿಐ (ಎಂ), ಸಿಪಿಐ, ಆರ್‌ಎಸ್‌ಪಿ ಜೊತೆಯಲ್ಲಿ ಮಂತ್ರಿಮಂಡಲ ಸೇರಿರುವುದು ಅಂಥದೊಂದು ಉದಾಹರಣೆಯಾಗಿದೆ.

ಕಮ್ಯುನಿಸ್ಟ್ ವಿರೋಧಿ ರಂಗ

ಇದರ ಹಿನ್ನೆಲೆ ಈ ರೀತಿ ಇದೆ. 1957-59ರಲ್ಲಿದ್ದ ಕಮ್ಯುನಿಸ್ಟ್ ಸರಕಾರವನ್ನು ಉರುಳಿಸುವ ಒಂದೇ ಉದ್ದೇಶದಿಂದ 1959-60ರಲ್ಲಿ ಅವಿಭಾಜ್ಯ ಕಾಂಗ್ರೆಸ್ಸು ಮುಸ್ಲಿಂಲೀಗ್ ಜೊತೆಯಲ್ಲಿ ರಾಜಕೀಯ ಸಂಯುಕ್ತ ರಂಗ ರಚಿಸಿತ್ತು. ಈ ರಂಗದ ಮುಖ್ಯ ನೇತಾರ ಕ್ರಿಶ್ಚಿಯನ್ನರ ಕೃಪೆ ಪಡೆದ ನಾಯರ್‌ಸರ್ವಿಸ್‌ಸೊಸೈಟಿಯ,ಪಾದ್ರಿಯಾಗಿದ್ದರು. ಜಾತೀಯ–ಮತೀಯ ಸಂಘಗಳೊಡನೆ ಸಂಯುಕ್ತರಂಗ ರಚಿಸಿರುವುದು ಆ ರೀತಿ ಪ್ರಾರಂಭವಾಗಿತ್ತು. ಕಮ್ಯುನಿಸ್ಟರು ಆ ಸಂಯುಕ್ತರಂಗವನ್ನು ರಚಿಸಿಲ್ಲ. ಆದರೆ ಕಮ್ಯುನಿಸ್ಟರ ವಿರುದ್ಧ ಅದು ರಚಿಸಲ್ಪಟ್ಟಿತ್ತು. ಆದ್ದರಿಂದ "ಮೂಲಪಾಪ" ಎಲ್ಲಿದೆ?

ಕಮ್ಯುನಿಸ್ಟ್ ಸರಕಾರವನ್ನು ಉರುಳಿಸಿ ಚುನಾವಣೆಯಲ್ಲಿ ಅವರನ್ನು ಸೋಲಿಸಿದ ನಂತರ ಕಮ್ಯುನಿಸ್ಟ್ ವಿರೋಧಿ ರಂಗದಲ್ಲಿ ಒಡಕುಂಟಾಯಿತು. ಹೊಸ ಕಮ್ಯುನಿಸ್ಟ್‌ವಿರೋಧಿ ಮಂತ್ರಿಮಂಡಲದಲ್ಲಿ ಸ್ಥಾನಗಳ ಸಲುವಾಗಿ ಕಾಂಗ್ರೆಸ್ಸು - ಮುಸ್ಲಿಂಲೀಗ್‌ಗಳೊಳಗೆ ಜಗಳಉಂಟಾಯಿತು. ಹಾಗೆಯೇ ಕ್ಯಾಥೋಲಿಕ್ ಚರ್ಚಿನ ಪ್ರಭಾವಕ್ಕೊಳಗಾದ ಕಾಂಗ್ರೆಸ್ ಮುಖಂಡರಿಗೂ ಇತರರಿಗೂ ಭಿನ್ನಾಭಿಪ್ರಾಯ ಉಂಟಾಗಿ ಬಂಡಾಯ ಕೇರಳ ಕಾಂಗ್ರೆಸ್ ಸ್ಥಾಪನೆಯಾಯಿತು. ಈ ಭಿನ್ನಾಭಿಪ್ರಾಯ ವಿಕೋಪಕ್ಕೇರಿ ಕೊನೆಗೆ ಕಮ್ಯುನಿಸ್ಟ್ ವಿರೋಧಿಯಾದ ಕಾಂಗ್ರೆಸ್ ಮುಖಂಡತ್ವದ ಮಂತ್ರಿಮಂಡಲ ಉರುಳುವುದರಲ್ಲಿ ಪರ್ಯಾವಸಾನ ಗೊಂಡಿತು.

ಸಂಯುಕ್ತರಂಗ ಸರಕಾರ

ಕಮ್ಯುನಿಸ್ಟ್ ವಿರೋಧಿ ರಂಗ ವಿಭಾಗವಾದಾಗ ಹೊಸಪರಿಸ್ಥಿತಿಯನ್ನು ಹೇಗೆ ಎದುರಿಸುವುದು? ಅದೇ ಸಮಯದಲ್ಲಿ ಕಮ್ಯುನಿಸ್ಟ್ ಪಾರ್ಟಿಯು –ಸಿಪಿಐ ಮತ್ತು ಸಿಪಿಐ (ಎಂ) ಆಗಿ ಇಬ್ಭಾಗವಾಯಿತು. ದುಡಿಯುವ ಜನತೆಯ ರಂಗವನ್ನು ಬಲಗೊಳಿಸುವ ಸಲುವಾಗಿ ಬಂಡವಾಳಶಾಹಿ ಗುಂಪಿನಲ್ಲುಂಟಾಗುವ ಪ್ರತಿಯೊಂದು ಭಿನ್ನಾಭಿಪ್ರಾಯಗಳನ್ನೂ ಉಪಯೋಗ ಮಾಡಿಕೊಳ್ಳಬೇಕೆಂದು ಲೆನಿನ್ನರ ತತ್ವ ಹೇಳುತ್ತಿರುವುದಕ್ಕನುಸಾರವಾಗಿ, ಕಮ್ಯುನಿಸ್ಟರೂ, ಇತರ ಎಡಪಕ್ಷಗಳೂ ಕಾಂಗ್ರೆಸ್–ಮುಸ್ಲಿಂ ಲೀಗಿನಲ್ಲುಂಟಾಗಿರುವ ಒಡಕಿನ ಉಪಯೋಗ ಮಾಡಿಕೊಂಡು ಮುಂಬರುವ ಮಧ್ಯಂತರ ಚುನಾವಣೆಯಲ್ಲಿ ಕಾಂಗ್ರೆಸ್ಸನ್ನು ಸೋಲಿಸಬೇಕೆಂದು ಸಿಪಿಐ(ಎಂ) ಅಭಿಪ್ರಾಯ ಪಟ್ಟಿತು. ಆದರೆ ಬಂಡಾಯ ಕೇರಳ ಕಾಂಗ್ರೆಸ್ ಮತ್ತು ಮುಸ್ಲಿಂ ಲೀಗ್ ಜಾತೀವಾದಿಗಳೆಂದೂ, ಕಾಂಗ್ರೆಸ್ಸಿಗಿಂತಲೂ ಪ್ರತಿಗಾಮಿಗಳೆಂದೂ ಹೇಳಿ ಅವರನ್ನು ದೂರವಿಟ್ಟರು. 1965 ಫೆಬ್ರವರಿಯಲ್ಲಿ ನಡೆದ ಚುನಾವಣೆಯಲ್ಲಿ ಈ ಎರಡು ವಿಚಾರಗಳೂ ಬಹಿರಂಗವಾಗಿಯೇ ಜಗಳವಾಗಬೇಕಾಯಿತು.

ಆ ಚುನಾವಣೆಯಲ್ಲಿ ಅಸೆಂಬ್ಲಿಯಲ್ಲಿ ಸಿಪಿಐ(ಎಂ) ಪ್ರಥಮ ಪಾರ್ಟಿಯಾಗಿ ಆರಿಸಲ್ಪಟ್ಟು, ಸಿಪಿಐ - ಆರ್‌ಎಸ್‌ಪಿ ಕೂಟ ಬಹುತೇಕ ನಿರ್ನಾಮವಾದಂತಾದಾಗ, ಆಳುವ ಕಾಂಗ್ರೆಸ್ಸನ್ನು ಸೋಲಿಸುವ ಸಲುವಾಗಿ, ಮುಸ್ಲಿಂ ಲೀಗಿನ ಕುರಿತು ಯಾವ ಮುಚ್ಚುಮರೆಯಿಲ್ಲದೆ ಅದರ ಜೊತೆಯಲ್ಲಿ ಸಂಯುಕ್ತರಂಗ ರಚಿಸುವ ಧೋರಣೆಗೆ ಈ ಕೂಟ ಒಪ್ಪಿಕೊಂಡಿತು. ಆ ಕಾರಣದಿಂದಾಗಿಯೇ ಕಾಂಗ್ರೆಸ್ಸು ತನ್ನ ಜೀವನದಲ್ಲಿಯೇ ಅತ್ಯಂತ ಅಪಮಾನಕಾರಕವಾದ ರೀತಿಯಲ್ಲಿ ಸೋಲನ್ನನುಭವಿಸಬೇಕಾಯಿತು.

ಆದರೆ ಸ್ವಲ್ಪ ಸಮಯದ ನಂತರ, ಕಾಂಗ್ರೆಸ್ಸೇತರ ಸಂಯುಕ್ತ ರಂಗದಲ್ಲಿ ತಾನು ಗಳಿಸಿದ ಸ್ಥಾನದ ದುರುಪಯೋಗ ಮಾಡಿಕೊಂಡು ಸಿಪಿಐ (ಎಂ)ನ್ನು ವಿರೋಧಿಸಲು ಕಾಂಗ್ರೆಸ್ಸಿನ ಜೊತೆಯನ್ನು ಒಪ್ಪಂದಕ್ಕೆ ಬರಲು ಮುಸ್ಲಿಂಲೀಗ್ ಪ್ರಯತ್ನ ನಡೆಸಿತು. ಇದರಂತೆಯೇ 1965ರಲ್ಲಿ ತವಂಗಾದ ಅಪಮಾನಕ್ಕೆ ಸೇಡು ತೀರಿಸಲು ಸಿಪಿಐ ಮತ್ತು ಆರ್‌ಎಸ್‌ಪಿಯವರೂ ಅವಕಾಶದ ದಾರಿ ನೋಡುತ್ತಿದ್ದರು. ಹೀಗೆ ಕಾಂಗ್ರೆಸ್ಸೇತರ ರಂಗದಲ್ಲಿ ಸಿಪಿಐ, ಆರ್‌ಎಸ್‌ಪಿ, ಮುಸ್ಲಿಂಲೀಗ್ ಮತ್ತು ಸೋಶಲಿಸ್ಟ್ ಪಾರ್ಟಿಯ ಒಂದು ವಿಭಾಗ ಸೇರಿ "ಕಿರಿ ರಂಗ" ರಚನೆಯಾಯಿತು. ಈ ಕಿರಿ ರಂಗವು ಬಹಿರಂಗವಾಗಿಯೇ ಕಾಂಗ್ರೆಸ್ ಮತ್ತು ವಿರೋಧಿ ಕೇರಳ ಕಾಂಗ್ರೆಸ್ ಜೊತೆಯಲ್ಲಿ ಸಂಬಂಧ ಇಟ್ಟುಕೊಂಡಿತು.

ಹಳೇ ರಂಗದ ಹೊಸ ರೂಪ

1959-60ರಲ್ಲಿದ್ದಂತೆಯೇ ಅದೇ ರಾಜಕೀಯ ಶಕ್ತಿಗಳನ್ನೊಳಗೊಂಡ ಆದರೆ ಈಗ ಸಿಪಿಐ ಮತ್ತು ಆರ್‌ಎಸ್‌ಪಿ ಯನ್ನು ಸೇರಿಸಿಕೊಂಡು ಹಳೇ ಕಮ್ಯುನಿಸ್ಟ್ ವಿರೋಧಿ ರಂಗ ಹೊಸ ರೂಪದಲ್ಲಿ ಉದಯವಾಯಿತು. ಸಿಪಿಐ(ಎಂ) ಮುಖಂಡತ್ವದ ಕಾಂಗ್ರೆಸ್ಸೇತರ ಸರಕಾರವನ್ನು ಉರುಳಿಸಿ, ಅನಂತರ ನಡೆದ ಚುನಾವಣೆಯಲ್ಲಿ ಗೆದ್ದು ಸಿಪಿಐ(ಎಂ)ಗೆ ವಿರೋಧವಾದ ಸರಕಾರ ರಚಿಸುವಲ್ಲಿ ಯಶಸ್ವಿಯಾಯಿತು.

ಆದರೆ 1959-60ರ ಕಮ್ಯೂನಿಸ್ಟ್ ವಿರೋಧಿ ರಂಗಕ್ಕೆ ತದ್ವಿರುದ್ಧವಾಗಿ, ಈಗಿನ ಹೊಸ ಕಮ್ಯುನಿಸ್ಟ್ ವಿರೋಧಿ ರಂಗದಲ್ಲಿ ಹಳೇ ಅವಿಭಾಜಿತ ಸಿ. ಪಿ. ಐ ಯ ಒಂದು ಗುಂಪು ಸೇರಿಕೊಂಡದ್ದಷ್ಟೇ ಅಲ್ಲ ಒಬ್ಬ ಮುಖ್ಯ ಮಂತ್ರಿಯನ್ನೂ ಒದಗಿಸಿತು. ಹಿಂದಿನ ಕಮ್ಯೂನಿಸ್ಟ್ ವಿರೋಧಿ ರಂಗ ಮತ್ತು ಸರಕಾರದಂತೆ ಅದು ಉರುಳಲಿಲ್ಲ. ಯಾಕೆಂದರೆ ಹಳೇ ಕಮ್ಯೂನಿಸ್ಟ್ ವಿರೋಧಿ ರಂಗ ಪೂರಾ ಪ್ರತಿಗಾಮಿ ಸ್ವರೂಪದ್ದಾಗಿತ್ತು. ಆದರೆ ಸಿ.ಪಿ.ಐ. ಮತ್ತು ಆರ್. ಎಸ್. ಪಿ. ಯವರು ಹೊಸ ರಂಗಕ್ಕೆ "ಎಡ" ರೂಪ ಕೊಟ್ಟರು. ಅಷ್ಟೇ ಅಲ್ಲದೆ "ರಾಷ್ಟ್ರೀಯ ಪ್ರಜಾಪ್ರಭುತ್ವ"ದ ಉದಾಹರಣೆಯಾಗಿ ಕೇರಳದಲ್ಲಿಯ ಇಂದಿರಾ ಕಾಂಗ್ರೆಸ್ ಬೆಂಬಲಿತ "ಕಮ್ಯೂನಿಸ್ಟ್ ಸರಕಾರ"ವೆಂದು ಹೇಳಿ ಬಹುಸಂಖ್ಯ ಅಂತರ್‌ರಾಷ್ಟ್ರೀಯಕಮ್ಯೂನಿಸ್ಟ್‌ಚಳವಳಿ ಈ ಸರಕಾರಕ್ಕೆ ಬೆಂಬಲ ನೀಡಿತು.

ರಂಗದ ಪತನ

1977ರಲ್ಲಿ ಕೇಂದ್ರದಲ್ಲಿ ಆಳುವ ಕಾಂಗ್ರೆಸ್‌ಗೆ ಸೋಲುಂಟಾದಾಗ ಈ ರಂಗವೂ ಪತನವಾಯಿತು. 1977ರಲ್ಲಿ ಕೇರಳದ ಮಟ್ಟಿಗೆ ಜನತಾ ಬಿರುಗಾಳಿ ಯಾವ ಪರಿಣಾಮವನ್ನುಂಟು ಮಾಡದಿದ್ದರೂ ಕೂಡ, ಅಖಿಲಭಾರತ ಮಟ್ಟದ ರಾಜಕೀಯ ಬಿಕ್ಕಟ್ಟಿನಿಂದ ಬಚಾವಾಗಲು ಸಿ. ಪಿ. ಐ. (ಎಂ.) ವಿರೋಧಿ ರಂಗದ ಪಕ್ಷಗಳಿಗೆ ಸಾಧ್ಯವಾಗಲಿಲ್ಲ. 1979ರಲ್ಲಿ ಸಿ.ಪಿ.ಐ. (ಎಂ.) ವಿರೋಧ ರಂಗ ಬಿದ್ದು ಹೋಯಿತು.

ಸಿ.ಪಿ.ಐ. (ಎಂ) ವಿರೋಧಿ ರಂಗದಲ್ಲಿದ್ದ ಇಂಡಿಯನ್ ಯೂನಿಯನ್ ಮುಸ್ಲಿಂ ಲೀಗಿನಲ್ಲಿ ಒಡಕುಂಟಾಗಲು ಪ್ರಾರಂಭವಾಗಿ ಅಖಿಲ ಭಾರತ ಮುಸ್ಲಿಂ ಲೀಗ್ ರಚನೆಯಾಯಿತು. ಕಾಂಗ್ರೆ ಮತ್ತು ಅದರ ಸರಕಾರದ ವಿರುದ್ಧ ಚಳವಳಿಯಲ್ಲಿ ಸಿ.ಪಿ.ಐ.(ಎಂ.) ಹಾಗೂ ಅದರ ಗೆಳೆಯರ ಜೊತೆಯಲ್ಲಿ ಈ ಮುಸ್ಲಿಂ ಲೀಗ್ ಸೇರಿಕೊಂಡಿತು. ಅಖಿಲ ಭಾರತದ ರಾಜಕೀಯ ಬಿಕ್ಕಟ್ಟಿನ ಪರಿಣಾಮ ಕಾಂಗ್ರೆ ಮೇಲೆ ಕೂಡ ಆಯಿತು. ಅದರ ಪರಿಣಾಮವಾಗಿ ಅದು ಕಾಂಗ್ರೆ ಮತ್ತು ಕಾಂಗ್ರೆಸ್ (ಎಸ್) ಎಂದು ವಿಭಾಗವಾಯಿತು. ಹೀಗೆ ಹೊಸ ಎಡ ಪ್ರಜಾಪ್ರಭುತ್ವ ರಂಗ ರಚನೆಯಾಯಿತು.

ಎಲ್ಲ ಜಾತಿ-ಧರ್ಮದ ಪಕ್ಷಗಳನ್ನೊಳಗೊಂಡ ಕಾಂಗ್ರೆಸ್ ಮುಖಂಡತ್ವದಲ್ಲಿಯ ಯುನೈಟೆಡ್ ಡೆಮೋಕ್ರಾಟಿಕ್ ರಂಗದ ಬದಲಾಗಿ, ತೀವ್ರವಿಚಾರ, ಪ್ರಜಾಪ್ರಭುತ್ವ ಹಾಗೂ ಜಾತ್ಯಾತೀತ ಶಕ್ತಿಗಳನ್ನೊಳಗೊಂಡ ಎಡ ಪ್ರಜಾಪ್ರಭುತ್ವ ರಂಗವಾಯಿತು. ಈ ರಂಗ ಬಲಗೊಳ್ಳುವುದರಿಂದ ಕಾಂಗ್ರೆಗಷ್ಟೇ ಅಲ್ಲ ಜಾತಿ-ಧರ್ಮದ ಮೇಲೆ ಅಧರಿತ ರಾಜಕೀಯ ಪಕ್ಷಗಳ ಮೇಲೂ ಪರಿಣಾಮವಾಗಿ ದೊಡ್ಡ ಸೋಲುಂಟಾಗುತ್ತದೆ.

ಜಾತಿ ಧರ್ಮದ ಮೇಲೆಯೇ ಅವಲಂಭಿಸಿರುವ ಕೆಲವು ಸಂಸ್ಥೆ ಮತ್ತು ರಾಜಕೀಯ ಪಕ್ಷಗಳು ತಮ್ಮ ಬಲ ಸಂವರ್ಧಿಸಿಕೊಳ್ಳಲು ಕೇರಳದಲ್ಲಿರುವ ಎರಡು ಮುಖ್ಯ ರಾಜಕೀಯ ಪಕ್ಷಗಳಿಂದ ಲಾಭ ಪಡೆಯಲು ಪ್ರಯತ್ನ ಮಾಡಿದ್ದನ್ನು ನಾವು ಅಲ್ಲಗಳೆಯುವುದಿಲ್ಲ. ಅದರಂತೆಯೇ ಸಿಪಿಐ (ಎಂ) ಮತ್ತು ಅದರ ಸಂಗಾತಿಗಳು ಕೆಲವು ಸಲ ಅಂಥ ಶಕ್ತಿಗಳ ಜೊತೆಯಲ್ಲಿ ಒಪ್ಪಂದ ಮಾಡಿಕೊಂಡಿರುವುದನ್ನು ನಿರಾಕರಿಸುತ್ತಿಲ್ಲ. ಇದರಲ್ಲಿರುವ ಮುಖ್ಯ ಪ್ರಶ್ನೆ ಯಾವುದೆಂದರೆ ಜಾತೀಯ–ಮತೀಯ ಶಕ್ತಿಗಳು ಹೆಚ್ಚು ಲಾಭ ಪಡೆದಿದ್ದಾರೋ ಅಥವಾ ಕ್ರಾಂತಿಕಾರಿ, ಪ್ರಜಾಪ್ರಭುತ್ವವಾದಿ - ಜಾತ್ಯಾತೀತ ಶಕ್ತಿಗಳು ತಮ್ಮ ಬಲ ಹೆಚ್ಚಿಸಿಕೊಂಡಿದ್ದಾರೋ?

ನಿಜ ಸಂಗತಿ ತಿಳಿಯೋಣ

1960ರ ಮಧ್ಯಂತರ ಚುನಾವಣೆಯಲ್ಲಿ ಈಗ ರಚಿತವಾಗಿರುವ ಮುಸಲ್ಮಾನರೇ ಬಹು ಸಂಖ್ಯೆಯಲ್ಲಿರುವ ಮಲ್ಲಪುರಂ ಜಿಲ್ಲೆಯಲ್ಲಿ ಅವಿಭಾಜಿತ ಸಿಪಿಐ ಯನ್ನು ಕಾಂಗ್ರೆಸ್-ಮುಸ್ಲಿಂ ಲೀಗ್ ಒಟ್ಟಾಗಿ ವಿರೋಧಿಸಿದಾಗ, ಸಿಪಿಐ ಪ್ರತಿನಿಧಿಗಳು ಪ್ರತಿಯೊಂದು ಮತಕ್ಷೇತ್ರದಲ್ಲೂ ಸೋತಿದ್ದರು. ಹೆಚ್ಚಿನವರೆಲ್ಲ ಡಿಪಾಜಿಟ್ ಕೂಡ ಕಳಕೊಂಡಿದ್ದರು. 1982ರಲ್ಲಿ ಅದೇ ಗುಂಪುಗಳು ಒಂದನ್ನೊಂದು ಎದುರಿಸಿದಾಗ ಎಡ ಪ್ರಜಾಪ್ರಭುತ್ವರಂಗ 1 ಸ್ಥಾನ ಗೆದ್ದು, ನೂರು ಮತಗಳಿಂದ

(6ನೇ ಪುಟ ನೋಡಿ)

ಜನಾಂಗ ದ್ವೇಷಿ ಆಡಳಿತ ನಾಶವಾಗಲಿ!

ದೇಶದೊಳಗೆ ವರ್ಣದ್ವೇಷದ ಧೋರಣೆ ಹಾಗೂ ನೆರೆಯ ದೇಶಗಳೊಂದಿಗೆ ವಸಾಹತುಶಾಹೀ ದರೋಡೆಕೋರ ಧೋರಣೆಗಳನ್ನು ತೀವ್ರವಾಗಿ ಮುಂದುವರಿಸುತ್ತಿರುವ ದಕ್ಷಿಣ ಆಫ್ರಿಕಾದ ಜನಾಂಗ ದ್ವೇಷಿ ಸರ್ಕಾರ ಇತ್ತೀಚೆಗೆ ಆಫ್ರಿಕನ್ ರಾಷ್ಟ್ರೀಯ ಕಾಂಗ್ರೆಸ್‌ನ ಮೂರು ಯುವಕ ಸದಸ್ಯರುಗಳನ್ನು ಗಲ್ಲಿಗೇರಿಸಿ ಜಾಗತಿಕ ಸಾರ್ವಜನಿಕ ಅಭಿಪ್ರಾಯವನ್ನು ಅತ್ಯಂತ ದೊಡ್ಡ ರೀತಿಯಲ್ಲಿ ಉಪೇಕ್ಷೆ ಮಾಡಿದೆ.

ಸಂಯುಕ್ತ ರಾಷ್ಟ್ರ ಸಂಸ್ಥೆಯ ಭದ್ರತಾ ಸಮಿತಿ, ಯುರೋಪಿಯನ್ ಆರ್ಥಿಕ ಸಮುದಾಯ, ವಿವಿಧ ಅಂತರ್ರಾಷ್ಟ್ರೀಯ ಸಂಘಟನೆಗಳು, ದಕ್ಷಿಣ ಆಫ್ರಿಕಾದ ಒಳಗಡೆ ಹಾಗೂ ಇತರೆಡೆಗಳಲ್ಲಿನ ಮಾನವ ಹಕ್ಕು ಸಂಸ್ಥೆಗಳು, ಚರ್ಚುಗಳೂ, (ಕೊನೇ ಗಳಿಗೆಯಲ್ಲಿ ಸೇರಿಕೊಂಡ ಬ್ರಿಟನ್, ಹಾಲೆಂಡ್ ಹಾಗೂ ಭಾರತವೂ ಸೇರಿದಂತೆ) ಹಲವು ದೇಶಗಳ ಸರಕಾರಗಳು ಮಾಡಿಕೊಂಡ ವಿನಂತಿಗಳನ್ನು ನಿರ್ಲಕ್ಷಮಾಡಿ ಜೂನ್ 9ರ ಮುಂಜಾವಿನಲ್ಲಿ ಜೆರ್ರಿ ಮೊಸೋಲೋದಿ, ಸೈಮನ್ ಮೊಗೋಯಿರೇನ್ ಹಾಗೂ ಮಾರ್ಕಸ್ ಮೊಟಾವುಂಗ್ ಎಂಬ ಮೂವರು ಸ್ವಾತಂತ್ರ್ಯ ಹೋರಾಟಗಾರರನ್ನು ಅಲ್ಪಮತದ ಬಿಳಿಯ ಜನಾಂಗದ್ವೇಷೀ ಆಡಳಿತ ಗಲ್ಲಿಗೇರಿಸಿತು. ಈ ಮೂವರೂ ಇತ್ತೀಚೆಗಷ್ಟೇ ಹದಿಹರೆಯ ಕಳೆದ ಯುವಕರು.

ಎರಡು ದಿನಗಳ ಹಿಂದೆಯಷ್ಟೇ ಭದ್ರತಾ ಸಮಿತಿ ಈ ಮೂವರು ಹೋರಾಟಗಾರರ ಜೀವವುಳಿಸುವಂತೆ ಅವಿರೋಧವಾಗಿ ಅಪೀಲು ಮಾಡಿಕೊಂಡಿತ್ತು. ಕಳೆದ ಎಂಟು ತಿಂಗಳಲ್ಲಿ ಇದು ಮೂರನೇಯ ಅಪೀಲು. ಇದಕ್ಕೆ ಪ್ರತಿಯಾಗಿ ಸಂಯುಕ್ತ ರಾಷ್ಟ್ರ ಸಂಸ್ಥೆಯಲ್ಲಿ ದಕ್ಷಿಣ ಆಫ್ರಿಕಾ ಸರಕಾರದ ರಾಯಭಾರೀ ವಕ್ತಾರರೊಬ್ಬರು ನೀಡಿರುವ ಹೇಳಿಕೆ ನಿಜವಾಗಿ ರೋಷವುಕ್ಕಿಸುವಷ್ಟು ಕ್ರೂರವಾಗಿದೆ. ದಕ್ಷಿಣ ಆಫ್ರಿಕಾದೊಳಗೆ ಸಂಯುಕ್ತ ರಾಷ್ಟ್ರ ಸಂಸ್ಥೆಯ ನಿರ್ಣಯವನ್ನು ನಿಕೃಷ್ಟವಾಗಿ ಕಾಣಲಾಗುವುದು ಎಂದಾತ ಪ್ರತಿಕ್ರಿಯಿಸಿದ್ದ. ಆ ಜನಾಂಗದ್ವೇಷೀ ಸರಕಾರ ದುಷ್ಟ ಸಾಮ್ರಾಜ್ಯಶಾಹಿಯ ಬೆಂಬಲದಿಂದಾಗಿ ಎಂತಹ ದುಷ್ಟ ಕ್ರಿಮಿನಲ್ ನಿಲುವು ತಳೆದಿದೆಯೆಂಬುದಕ್ಕೆ ಈ ಪ್ರತಿಕ್ರಿಯೆಯೇ ಸಾಕ್ಷಿ. ಒಂದು ವರ್ಷದ ಹಿಂದೆ ಈ ಮೂವರು ಸ್ವಾತಂತ್ರ್ಯ ಹೋರಾಟಗಾರರಿಗೆ ದಯೆ ತೋರಿಸಬೇಕೆಂದು ಭದ್ರತಾ ಸಮಿತಿ ಮೊದಲ ಬಾರಿ ಅಪೀಲು ಮಾಡಿಕೊಂಡಾಗ ಜನಾಂಗ ದ್ವೇಷೀ ಸರಕಾರದ ವಕ್ತಾರರೊಬ್ಬರು ಅದನ್ನು "ಬೇಜವಾಬ್ದಾರಿತನ" ಹಾಗೂ "ಅನಗತ್ಯ" ಎಂದು ಜರೆದಿದ್ದರು. ಇದೇ ರೀತಿ ನಾಲ್ಕು ವರ್ಷಗಳ ಹಿಂದೆ ಇನ್ನೊಬ್ಬ ಯುವಕ ಸ್ವಾತಂತ್ರ್ಯ ಹೋರಾಟಗಾರ ಸೊಲೊಮನ್ ಮಹಾಲಾಂಗುರವರ ಜೀವ ಉಳಿಸಬೇಕೆಂದು ಭದ್ರತಾ ಸಮಿತಿ ಅಪೀಲು ಮಾಡಿಕೊಂಡ ಮೂರನೇ ದಿನವೇ ಜನಾಂಗದ್ವೇಷಿ ಸರಕಾರ ಆತನನ್ನು ಗಲ್ಲಿಗೇರಿಸಿತು.

ಕೆಲವು ವರ್ಷಗಳ ಹಿಂದೆ ಪ್ರದರ್ಶನವೊಂದರಲ್ಲಿ ಭಾಗವಹಿಸಿದ್ದ ಅಮಾಯಕ ಗಂಡಸರು, ಹೆಂಗಸರು ಹಾಗೂ ಮಕ್ಕಳ ಮೇಲೆ ಪೋಲೀಸರು ಗೋಳೀಬಾರು ನಡೆಸಿ ಹಲವರನ್ನು ಕೊಂದ ಜೊಹನ್ಸ್‌ಬರ್ಗ್‌ನ ಹೊರವಲಯದಲ್ಲಿರುವ ಕರಿಯರ ವಾಸಸ್ಥಳವಾದ ಸೊವೆಟೋದಾದ್ಯಂತ ಈ ಜೂನ್ 9ರ ಮುಂಜಾವಿನ 5 ಗಂಟೆಗೆ ಎಲ್ಲಾ ಚರ್ಚ್ ಗಂಟೆಗಳು ಢಣಢಣಿಸಲಾರಂಭಿಸಿದವು.

ಗಲ್ಲಿಗೇರಿಸಿದ ನಂತರ ಜಗತ್ತಿನಾದ್ಯಂತ ಮುಂದಾಳುಗಳು ದಕ್ಷಿಣ ಆಫ್ರಿಕಾ ಆಡಳಿತವನ್ನು ಬಲವಾಗಿ ಖಂಡಿಸಿದ್ದಾರೆ. "ಭಾರೀ ಜಾಗತಿಕ ಅಭಿಪ್ರಾಯದ ವಿರುದ್ಧ ಅಮಾನವೀಯ ಹಾಗೂ ಅನೈತಿಕ ವ್ಯವಸ್ಥೆಯೊಂದನ್ನು" ದಕ್ಷಿಣ ಆಫ್ರಿಕಾ ಆಡಳಿತ ಬೆಳೆಸುತ್ತಿದೆಯೆಂದು ಸ್ವೀಡನ್ನಿನ ಪ್ರಧಾನ ಮಂತ್ರಿ ಒಲಾಫ್ ಪಾಮೆ ಆಪಾದಿಸಿದ್ದಾರೆ. ಸಂಯುಕ್ತ ರಾಷ್ಟ್ರ ಸಂಸ್ಥೆಯ ಪ್ರಧಾನ ಕಾರ್ಯದರ್ಶಿ ಜಾವಿಯರ್ ಪೆರೆಝ್ ಡಿ ಕ್ವೆಲ್ಲರ್ ಹಾಗೂ ಭದ್ರತಾ ಸಮಿತಿಯ ಅಧ್ಯಕ್ಷ ವಿಲ್ಲಿಕ್ ಮಾಶಿಂಗ್ಯಾಡ್ಜ ಸುದ್ದಿ ಕೇಳಿ ತಮ್ಮ ಆಘಾತವನ್ನು ವ್ಯಕ್ತಪಡಿಸಿ ಈ ಸ್ವಾತಂತ್ರ್ಯ ಹೋರಾಟಗಾರರ ಕುಟುಂಬಗಳಿಗೆ ಸಂತಾಪ ಸೂಚಿಸಿದ್ದಾರೆ. ದಕ್ಷಿಣ ಆಫ್ರಿಕಾದಲ್ಲುಂಟಾಗಿರುವ ಹೊಸ ಪರಿಸ್ಥಿತಿಯನ್ನು ಭದ್ರತಾ ಸಮಿತಿ ಪರಿಶೀಲಿಸಲಿದೆ ಎಂದು ಸಂಯುಕ್ತ ರಾಷ್ಟ್ರ ಸಂಸ್ಥೆಯ ವಕ್ತಾರರೊಬ್ಬರು ಹೇಳಿದ್ದಾರೆ.

ನವ ದೆಹಲಿಯಲ್ಲಿ ಆಫ್ರಿಕನ್ ರಾಷ್ಟ್ರೀಯ ಕಾಂಗ್ರೆಸ್ ನೀಡಿದ ಪತ್ರಿಕಾ ಹೇಳಿಕೆಯೊಂದರಲ್ಲಿ ಹೀಗೆ ಹೇಳಿದೆ—

"ನಮ್ಮ ಸಂಗಾತಿಗಳು ಹುತಾತ್ಮರಾಗಿ ನೂರಾರು ದಕ್ಷಿಣ ಆಫ್ರಿಕನ್ನರಿಗೆ ಜನಾಂಗದ್ವೇಷೀ ಕಳಂಕವನ್ನು ತೊಡೆದುಹಾಕಲು ಇನ್ನೂ ಹೆಚ್ಚಿನ ಕಸುವಿನಿಂದ, ಸ್ಥೈರ್ಯದಿಂದ ಹೋರಾಡಲು ಪ್ರೇರಣೆ ನೀಡಿದ್ದಾರೆ. ಸ್ವಾತಂತ್ರ್ಯ ಹೋರಾಟ ತೀವ್ರಗೊಳ್ಳುತ್ತಾ ಹೋದಂತೆ ಇಂತಹ ಸರ್ವಶ್ರೇಷ್ಠ ತ್ಯಾಗಕ್ಕೆ ಸಿದ್ಧವಾಗುವ ಇನ್ನಷ್ಟು ಮೊಟಾವುಂಗ್, ಮೋಗೋಯಿರೇಸ್ ಹಾಗೂ ಮೊಸೋಲೋದಿಗಳು ಮೂಡಿಬರಲಿದ್ದಾರೆ. ಸ್ವಾತಂತ್ರ್ಯ ಹೋರಾಟವನ್ನು ಅಡಗಿಸುವುದು ತಗಡುಂಡಬ್ಬಿ ಸರ್ವಾಧಿಕಾರಿಗಳಿಗಾಗಲೀ ಮತ್ತು ಅವರ ಬಲಶಾಲೀ ವಿದೇಶೀ ಗೆಳೆಯರಿಗಾಗಲೀ ಎಂದೂ ಸಾಧ್ಯವಿಲ್ಲ. ತಮ್ಮ ವಿನಾಶಕಾರೀ ಧೋರಣೆಯ ಗಂಭೀರ ಪರಿಣಾಮಗಳೇನಾಗಬಹುದೆಂದು ದಕ್ಷಿಣ ಆಫ್ರಿಕಾದ ಕುರುಡು ಹಾಗೂ ವಿವೇಕಶೂನ್ಯ ಜನಾಂಗದ್ವೇಷೀ ಆಳರಸರಿಗೆ ಎಚ್ಚರಿಕೆ ನೀಡಬೇಕಾಗಿದೆ. ಈ ಮೂವರು ಯುವಕರ ಉದ್ದೇಶಪೂರ್ವಕವಾದ ಹಾಗೂ ನಿರ್ದಯ ಕೊಲೆ ಈಗಾಗಲೇ ಜನಾಂಗೀಯ ಬಿಕ್ಕಟ್ಟು ಇನ್ನೇನು ಸಮಾಜ ಮುರಿದು ಬೀಳಲಿದೆ ಎಂಬಂತಹ ಸ್ಥಿತಿಯಲ್ಲಿರುವ ಸ್ಫೋಟಕ ಸನ್ನಿವೇಶವನ್ನು ಮತ್ತಷ್ಟು ಉತ್ಕಟಗೊಳಿಸುತ್ತದೆಯಷ್ಟೆ. ದೂರದೃಷ್ಟಿಯಿಲ್ಲದ ಹಾಗೂ ದಮನಕಾರೀ ಧೋರಣೆಗಳ ಫಲವಾಗಿ ನಡೆಯಬಹುದಾದ ಭೀಕರ ರಕ್ತಪಾತದ ಹೊಣೆ ಸಂಪೂರ್ಣವಾಗಿ ಈ ಆಳರಸರ ತಲೆಯ ಮೇಲೇನೇ ಬೀಳುತ್ತದೆ."

ಈ ಘಟನೆಯ ನಂತರ ವರ್ಣದ್ವೇಷದ ವಿರುದ್ಧ ಸಂಯುಕ್ತ ರಾಷ್ಟ್ರ ಸಂಸ್ಥೆಯ ವಿಶೇಷ ಸಮಿತಿಯ ಅಧ್ಯಕ್ಷ ಯೂಸೂಫ್ ಮೈಟಾಮುಷೂಲೆಯವರು ದಕ್ಷಿಣ ಆಫ್ರಿಕಾದ ಜೈಲುಗಳಲ್ಲಿನ ಪರಿಸ್ಥಿತಿಯ ಬಗ್ಗೆ ಪರಿಶೀಲನೆ ನಡೆಸಲೇಬೇಕೆಂದು ಅಂತರಾಷ್ಟ್ರೀಯ ರೆಡ್ ಕ್ರಾಸ್‌ನ ಅಧ್ಯಕ್ಷ ಅಲೆಕ್ಸಾಂಡರ್ ಹೇಯವರನ್ನು ಕೇಳಿಕೊಂಡಿದ್ದಾರೆ. ಆಫ್ರಿಕನ್ ರಾಷ್ಟ್ರೀಯ ಕಾಂಗ್ರೆಸ್ಸಿನ ನೆಲ್ಸನ್ ಮ್ಯಾಂಡೆಲಾ, ವಾಲ್ಟರ್ ಸಿಸುಲು ಹಾಗೂ ಇತರ ನಾಯಕರನ್ನು ಬಂಧನದಲ್ಲಿಟ್ಟಿರುವ ಪೂಲ್ಸ್‌ಮೂರ್ ಜೈಲಿನಲ್ಲಿನ ಪರಿಸ್ಥಿತಿಯ ಬಗ್ಗೆ ಬಂದಿರುವ ಸುದ್ದಿಗಳಿಂದ ಸಮಿತಿ ಕಳವಳಗೊಂಡಿದೆ ಎಂದು ಅವರು ಹೇಳಿದ್ದಾರೆ. ಅಂತರರಾಷ್ಟ್ರೀಯ ಕಾರ್ಮಿಕ ಸಂಘಟನೆ ಕೂಡಾ ವರ್ಣದ್ವೇಶಕ್ಕೆ ಬಲಿಯಾದವರ ಪುನರ್ವಸತಿಗಾಗಿ ಒಂದು ತಾಂತ್ರಿಕ ನೆರವು ಯೋಜನೆ ರೂಪಿಸಿದೆ. ಆದರೆ ಜನಾಂಗದ್ವೇಷೀ ಆಡಳಿತ ಅನುಸರಿಸುತ್ತಿರುವ ಧೋರಣೆ ಇನ್ನಷ್ಟು ಗಡಸುಗೊಳ್ಳುತ್ತಾ ಹೋದಂತೆ ಮತ್ತು ಈ ಜನಾಂಗದ್ವೇಷೀ ಆಡಳಿತದ ಮೂಲಕ ಆಫ್ರಿಕಾದ ದಕ್ಷಿಣ ಭಾಗದ ತುಂಬೆಲ್ಲಾ ದೊರೆಯುವ ಕಚ್ಚಾ ಸಾಮಗ್ರಿಗಳನ್ನು ಪಡೆಯುವ ಆಶಾಭಾವನೆ ಹೊಂದಿರುವ ಸಾಮ್ರಾಜ್ಯಶಾಹಿ ಅದಕ್ಕಾಗಿಯೇ ಜನಾಂಗದ್ವೇಷೀ ಸರಕಾರಕ್ಕೆ ಇನ್ನಷ್ಟು ನಿಕಟ ಬೆಂಬಲ ನೀಡುತ್ತಾ ಹೋದಂತೆ ವರ್ಣದ್ವೇಷಕ್ಕೆ ತುತ್ತಾಗುವವರು ಅಸಂಖ್ಯವಾಗಿ ಹೆಚ್ಚುತ್ತಲೇ ಹೋಗುತ್ತಾರೆ.

ಡಿ. ವೈ. ಎಫ್. ಐ. ಸಭೆಗಳು

ಕೋಲಾರ

6–7–83ರಂದು ಕೋಲಾರ ಜಿಲ್ಲೆಯ ಚಿಂತಾಮಣಿ ನಗರದ ಮಾಳಪಲ್ಲಿಯಲ್ಲಿ ಡಿ.ವೈ.ಎಫ್.ಐ. ಸಭೆ ನಡೆಯಿತು. ಸಭೆಯನ್ನು ಸ್ವಾಗತಿಸುತ್ತ ಕಾಂ। ಆನಂದ್ ಅವರು ಯುವಜನರ ಸಮಸ್ಯೆಗಳಿಗೆ ಹೋರಾಟದಲ್ಲಿ ಪರಿಹಾರವನ್ನು ಕಾಣುವ ಡಿ. ವೈ. ಎಫ್. ಐ. ಸಂಘಟನೆಯನ್ನು ತೀವ್ರತರವಾಗಿ ಬೆಳೆಸಬೇಕೆಂದು ಹೇಳಿದರು.

ಮುಖ್ಯಅತಿಥಿಯಾಗಿ ಆಗಮಿಸಿದ್ದ ರಾಜ್ಯ ಸಂಘಟನಾ ಸಮಿತಿಯ ಸದಸ್ಯರೂ ಹಾಗೂ ಕೋಲಾರ ಜಿಲ್ಲಾ ಸಂಘಟನಾ ಸಮಿತಿಯ ಸಂಚಾಲಕರಾದ ಕಾಂ॥ ಕೆ. ವಿ. ಸತ್ಯನಾರಾಯಣ ಅವರು ಡಿ. ವೈ. ಎಫ್. ಐ. ನ ಐತಿಹಾಸಿಕ ಅಸ್ತಿತ್ವ ಹಾಗೂ ಬೆಳವಣಿಗೆಯನ್ನು ವಿವರಿಸಿ ರಾಷ್ಟ್ರದ ಸಮಗ್ರತೆಗೆ ಧಕ್ಕೆ ತರಲು ಹವಣಿಸುತ್ತಿರುವ ಅಮೆರಿಕನ್ ಪಿತೂರಿಗಾರ ಸಂಚನ್ನು ಸೋಲಿಸಬೇಕೆಂದು ಕರೆಯಿತ್ತ ಅವರು ಅಸ್ಸಾಂ ಚಳುವಳಿ ಸಂವಿಧಾನಬಾಹಿರವಾಗಿದ್ದು ಭಾರತೀಯ ಭಾಷಾ ಅಲ್ಪ ಸಂಖ್ಯಾತರಿಗೆ ಅಸ್ಸಾಂ ಚಳುವಳಿಗಾರರು ನೀಡಿರುವ ಚಿತ್ರಹಿಂಸೆ, ಕೊಲೆ, ಸುಲಿಗೆಗಳನ್ನು ವಿವರಿಸಿದರಲ್ಲದೆ, ಈ ಪ್ರತ್ಯೇಕತಾ ಚಳುವಳಿಯನ್ನು ನಾಶಪಡಿಸುವವರೆವಿಗೆ ಡಿ.ವೈ.ಎಫ್.ಐ. ಹಾಗೂ ಇತರ ಪ್ರಜಾಸತ್ತಾತ್ಮಕ ಶಕ್ತಿಗಳು ಹೋರಾಡುವುದಾಗಿ ಹೇಳಿದರು.

ಮುಂದುವರಿದ ಅವರು ಅಸ್ಸಾಂನಲ್ಲಿ ಚಳುವಳಿಗಾರರ ಚುನಾವಣಾ ಬಹಿಷ್ಕಾರದಲ್ಲಿ ಪಾಲ್ಗೊಂಡಿರುವ ಜನತಾ, ಬಿ.ಜೆ.ಪಿ.ಗಳು ಅತ್ಯಂತ ಸುಲಭವಾಗಿ ಸರ್ವಾಧಿಕಾರಿ ಕಾಂಗ್ರೆಸ್ ಅಧಿಕಾರಕ್ಕೆ ಬರಲು ಕಾರಣವಾಗಿವೆ ಎಂದು ಹೇಳಿ ಜೂನ್ 20, ಡಿ. ವೈ. ಎಫ್. ಐ. ನ ರಾಷ್ಟ್ರೀಯ ಸಮಗ್ರತಾ ದಿನಾಚರಣೆ ಎಂದರೆ ಅದು ಸಾಂಕೇತಿಕ ದಿನ ಮಾತ್ರ. ಹೋರಾಟವಿರುವುದು ನಿರಂತರ ಎಂದು ಹೇಳಿದರು.

ಹೊಸಪೇಟೆ

ಇತ್ತೀಚೆಗೆ ಹೊಸಪೇಟೆಯಲ್ಲಿ ಜಿಲ್ಲಾ ಮಟ್ಟದ ಡಿ.ವೈ.ಎಫ್.ಐ. ಸಂಘಟನಾ ಸಭೆ ನಡೆಯಿತು. ಸಭೆಯಲ್ಲಿ ಕಾ। ವೆಂಕೋಬ ನಾಯಕ್ ಹಾಗೂ ರಾಮಚಂದ್ರ ನಾವಡ ಅವರುಗಳು ಮಾತನಾಡಿ, ರಾಜ್ಯ ಡಿ. ವೈ. ಎಫ್. ಐ.ಯನ್ನು ಸಂಘಟನಾ ಸಮಿತಿಯನ್ನಾಗಿ ಪರಿವರ್ತಿಸಿರುವುದರ ಬಗ್ಗೆ ವಿವರಿಸಿದರು.

ರಾಷ್ಟ್ರದ ಸಮಗ್ರತೆಗೆ ಧಕ್ಕೆಯೊಡ್ಡುವ, ಪ್ರತ್ಯೇಕತಾ ಭಾವನೆಯುಳ್ಳ ಅಸ್ಸಾಂ ಚಳುವಳಿ, ಅಸ್ಸಾಂ ಜನತೆಯ ಚಳುವಳಿಯಾಗಿರದೆ ಅಮೆರಿಕನ್ ಸಾಮ್ರಾಜ್ಯಶಾಹಿಗಳ ಪರವಾಗಿರುವ ಕೆಲವು ಸ್ಥಾಪಿತ ಹಿತಾಶಕ್ತಿಗಳ ಸಂಚನ್ನು ಬಯಲು ಮಾಡುವುದು ಡಿ.ವೈ.ಎಫ್.ಐ.ನ ಪ್ರಮುಖ ಕರ್ತವ್ಯವಾಗಿದೆ ಎಂದು ಹೇಳಿ, ಹೊಸಪೇಟೆಯ ವಿಜಯನಗರ ಉಕ್ಕಿನ ಕಾರ್ಖಾನೆಯನ್ನು ಸ್ಥಾಪಿಸಲು ರಾಜ್ಯಮಟ್ಟದ ಹೋರಾಟವನ್ನು ಡಿ.ವೈ.ಎಫ್.ಐ. ಸಂಘಟಿಸುವುದು ಎಂದ ಅವರು ಸ್ಥಳೀಯವಾಗಿ ಯುವಜನ ಸಂಘಟನೆಯವರು ಸಹಕಾರ ನೀಡಬೇಕೆಂದು ವಿನಂತಿಸಿಕೊಂಡರು.

ನಂತರ ಕಾ। ವೆಂಕೋಬನಾಯಕ್ ಅವರನ್ನು ಸಂಚಾಲಕರನ್ನಾಗಿಯೂ ಕಾ॥ ರಾಮಚಂದ್ರ ನಾವಡ ಅವರನ್ನು ಸಹ ಸಂಚಾಲಕರನ್ನಾಗಿಯೂ ಆರಿಸಲಾಯಿತು.

ಬೆಂಗಳೂರು:

ಎಸ್.ಎಫ್.ಐ. ಸಭೆ

ದಿನಾಂಕ 20–6–83ರಂದು ಬೆಂಗಳೂರು ಜಿಲ್ಲಾ ಸಮಿತಿ ಸಭೆ ಸೇರಿತ್ತು. ಸಭೆಯ ಮೊದಲು ಅಸ್ಸಾಂನ ಚಳುವಳಿ ಮತ್ತು ಚುನಾವಣೆ, ಸಂದರ್ಭದಲ್ಲಿ AASU ಮತ್ತು GSP ಗೂಂಡಾಗಳಿಂದ ಕೊಲೆಗೀಡಾದ ಎಸ್. ಎಫ್. ಐ.ನ ಸಂಗಾತಿಗಳಾದ ಕಾಮ್ರೆಡ್ ಸಮೀರ್‌ಪಾಲ್, ಮನೆಲಾಲ್‌ಮಿಯಾನ್, ಬಿರಂಚಿ ಪಟವಾರಿ ಕೋಶೇಶ್ವರ್ ಬೋರಾ, ನಿರಂಜನ್ ತಾಲೋಕ್‌ದರ್, ಕೈಲಾಸ್‌ಶರ್ಮ, ಅನಿಲ್ ಪತಾಕ್‌ರವರುಗಳಿಗೂ ರಾಜ್ಯದ ಬಂಡಾಯ ಸಾಹಿತಿ ದೇವಯ್ಯ ಹರವೆ, ಆಂಧ್ರದಕ್ರಾಂತಿಕಾರಿ ಕವಿ ಶ್ರೀರಂಗಂ ಶ್ರೀನಿವಾಸರವರಿಗೂ ಸಿ.ಪಿ.ಐ (ಎಂ) ನ ತಮಿಳುನಾಡು ಮುಖಂಡ ಕಾಂ॥ ಎಂ. ಆರ್. ವೆಂಕಟರಾಮ್‌ರವರಿಗೂ ಶ್ರದ್ಧಾಂಜಲಿಯನ್ನು ಅರ್ಪಿಸಿತು.

ಬೆಂಗಳೂರು ಜಿಲ್ಲಾ ಸಮಿತಿಯನ್ನು ಈ ಸಭೆಯಲ್ಲಿ ಪುನರ್ ಸಂಘಟಿಸಲಾಯಿತು. ಪುನರ್ ಸಂಘಟಿತ ಸಮಿತಿಯಲ್ಲಿ ಡಿ. ಶಿವಶಂಕರ್ (ಅಧ್ಯಕ್ಷ) [illegible]ದ್ರತೇಜಸ್ವಿ (ಉಪಾಧ್ಯಕ್ಷ) ಎಸ್. ರಾಜಣ್ಣ (ಕಾರ್ಯದರ್ಶಿ) ರಘುನಾಥ ರೆಡ್ಡಿ (ಸಹಕಾರ್ಯದರ್ಶಿ) ನಾರಾಯಣಸ್ವಾಮಿ (ಖಜಾಂಚಿ) ಸದಸ್ಯರುಗಳಾಗಿ ಶ್ರೀಧರಮೂರ್ತಿ, ಸುಬ್ಬರೆಡ್ಡಿ ಆರ್. ಮೋಹನ್, ಜಿ. ಎನ್. ಮೋಹನ್, ಟಿ.ಎನ್. ರಾಮಚಂದ್ರ, ಎಸ್.ಪಿ. ಕೃಷ್ಣಪ್ಪ, ವೀರಣ್ಣ, ಕೆ.ಸಿ. ಲಕ್ಷ್ಮಿನಾರಾಯಣ, ಎಂ. ಕೃಷ್ಣಮೂರ್ತಿ, ಎಲ್ಲಪ್ಪ, ವೈ. ಹನುಮಂತರಾಜುರವರುಗಳನ್ನು ಆಯ್ಕೆ ಮಾಡಲಾಯಿತು. ಮುಂದಿನ ಶೈಕ್ಷಣಿಕ ವರ್ಷದಲ್ಲಿ ಜಿಲ್ಲೆಯಲ್ಲಿ 5,000 ಸದಸ್ಯತ್ವದ ಚಳುವಳಿಯನ್ನು ಜುಲೈ 10 ರವರೆವಿಗೂ ನಡೆಸಬೇಕೆಂದು ತೀರ್ಮಾನಿಸಲಾಗಿದೆ. ಜೂನ್ ತಿಂಗಳ ಕೊನೆಯ ವಾರವನ್ನು ಗೋಡೆ ಬರಹವಾರವನ್ನಾಗಿ ಆಚರಿಸಬೇಕೆಂದು ಹಾಗೂ ಎಸ್.ಎಫ್.ಐ.ನ 5ನೇಯ ರಾಜ್ಯ ಸಮ್ಮೇಳನವನ್ನು ಬೆಂಗಳೂರಿನಲ್ಲಿ ನಡೆಸಲು ಜಿಲ್ಲಾ ಸಮಿತಿ ತೀರ್ಮಾನ ಕೈಗೊಂಡಿತು.

ಹರಪನಹಳ್ಳಿ ತಾಲ್ಲೂಕ್ ರೈತರ ಅಭ್ಯಾಸ ಶಿಬಿರ

ದಿನಾಂಕ 22 ಮತ್ತು 23-6-83ರ ಈ ಎರಡು ದಿನಗಳಲ್ಲಿ ಪ್ರಾಂತ ರೈತ ಸಂಘದ ವತಿಯಿಂದ ಕಸವನಹಳ್ಳಿ ಗ್ರಾಮದಲ್ಲಿ ರೈತರ ಅಭ್ಯಾಸ ಶಿಬಿರವನ್ನು ನಡೆಸಲಾಯಿತು. ಈ ಅಭ್ಯಾಸ ಶಿಬಿರವನ್ನು ನಡೆಸಿಕೊಡಲು ಪ್ರಾಂತ ರೈತ ಸಂಘದ ರಾಜ್ಯಸಮಿತಿಯ ಅಧ್ಯಕ್ಷರಾದ ಕಾ॥ ಪಿ. ರಾಮಚಂದ್ರ ರಾವ್ ಮತ್ತು ಕಾ। ಎನ್. ಕೆ. ಉಪಾದ್ಯಾಯರವರು ಆಗಮಿಸಿದ್ದರು. ಕೊನೆಯ ದಿನ ಪ್ರಾಂತ ರೈತ ಸಂಘದ ಕಾರ್ಯಕರ್ತರು ಬೆಲ್ಚಿ ನಾಟಕವನ್ನು ಪ್ರದರ್ಶಿಸಿದರು.

ಹರಪನಹಳ್ಳಿ ತಾಲೂಕಿನ ಕಸವನಹಳ್ಳಿ ಗ್ರಾಮದ ಬಡ ರೈತರು ಹಾಗೂ ಕೃಷಿ ಕೂಲೀಕಾರರು ದಿನಾಂಕ 24-6-83ರಂದು ಬಿ.ಡಿ.ಓ. ಕಛೇರಿಯ ಭ್ರಷ್ಟತೆಯ ವಿರುದ್ಧ ಹಾಗೂ ಜನತಾಮನೆಗಳ ದುರ್ವ್ಯವಹಾರ ಕುಡಿಯುವ ನೀರು, ರಸ್ತೆ ವಿದ್ಯುತ್ ದೀಪ ಇನ್ನು ಮುಂತಾದ ಸಮಸ್ಯೆಗಳೊಂದಿಗೆ ಪ್ರಾಂತ ರೈತ ಸಂಘದ ಕೆಂಬಾವುಟದ ಅಡಿಯಲ್ಲ ಸುಮಾರು 25 ಕಿ. ಮೀ. ಕಾಲ್ನಡಿಗೆ ಜಾಥಾದೊಂದಿಗೆ ತಾಲ್ಲೂಕಿನ ಕೇಂದ್ರಕ್ಕೆ ಬಂದು ಮುಖ್ಯ ರಸ್ತೆಗಳಲ್ಲಿ ಬೃಹತ್ ಮೆರವಣಿಗೆಯನ್ನು ತೆಗೆದರು. ಈ ಮೆರವಣಿಗೆಯಲ್ಲಿ ಮುದುಕರು, ಹೆಣ್ಣುಮಕ್ಕಳು ತಮ್ಮ ಚಿಕ್ಕ ಮಕ್ಕಳೊಂದಿಗೆ ಭಾಗವಹಿಸಿ

ರೈತ ಸಂಘದ ಚಟುವಟಿಕೆಗಳು

ರೈತ ಸಂಘದ ರಾಜ್ಯ ಸಮಿತಿಯ ಅಧ್ಯಕ್ಷರಾದ ಕಾ। ಪಿ. ರಾಮಚಂದ್ರ ರಾವ್ ಹಾಗೂ ಕಾ॥ ಎನ್. ಕೆ. ಉಪಾದ್ಯಾಯ, ಕಾ। ಪಿ.ಆರ್. ವೆಂಕಟೇಶ್ ಕಾ। ಬಿ.ಪರಶುರಾಮ್ ವಹಿಸಿದ್ದರು.

ತಾಲ್ಲೂಕಿನ ಕಛೇರಿಯ ಮುಂದುಗಡೆ ಬಹಿರಂಗ ಸಭೆ ನಡೆಯಿತು. ಮಳೆ ಸುರಿಯುತ್ತಿದ್ದರೂ ಜನ ಚದರದಂತೆ ಸಭೆಯಲ್ಲಿ ಭಾಗವಹಿಸಿದ್ದರು. ಸಭೆಯನ್ನು ಉದ್ದೇಶಿಸಿ ಕಾ। ಎನ್. ಕೆ. ಉಪಾಧ್ಯಾಯರವರು ಮಾತನಾಡಿದರು. ಸ್ಥಳೀಯ ಬಿ. ಡಿ. ಓ. ಕಛೇರಿಯ ಭ್ರಷ್ಟ ನಡತೆ, ಅಧಿಕಾರಿಗಳ ಸರ್ವಾಧಿಕಾರತ್ವವನ್ನು ಖಂಡಿಸಿದರು. ತಾಲ್ಲೂಕಿನ ಸಂಚಾಲಕ ಕಾ। ಬಿ. ಪರಶುರಾಮ್‌ರವರ ಮೇಲೆ ಬಿ.ಡಿ.ಓ, ಕೊಟ್ಟಿರುವ ಸುಳ್ಳು ಅಪಾದನೆಗಳ ಪೋಲೀಸ್ ದೂರನ್ನು ಹಿಂತೆಗೆಯುವಂತೆ ಒತ್ತಾಯಿಸಿದರು. ಅಧಿಕಾರಿಗಳೊಂದಿಗೆ ಚರ್ಚಿಸಿದ ವಿಷಯವನ್ನು ಕಾ। ಪಿ. ರಾಮಚಂದ್ರರಾವ್ ಜನತೆಗೆ ವಿವರಿಸಿ ಹೇಳಿದರು. ಬಿ.ಡಿ.ಓ. ತನ್ನ ತಪ್ಪುಗಳನ್ನು ಒಪ್ಪಿಕೊಂಡು ರೈತರ ಸಮಸ್ಯೆಗಳನ್ನು ತಕ್ಷಣ ಈಡೇರಿಸುವುದಾಗಿ ಆಶ್ವಾಸನೆ ಕೊಟ್ಟಿದ್ದಾರೆ.

ಶಿಂಗ್ರಿಹಳ್ಳಿಯಲ್ಲಿ ರೈತ ಸಂಘದ ಬೃಹತ್ ಸಭೆ

ದಿನಾಂಕ 24-6-83ರಂದು ಶಿಂಗ್ರಿಹಳ್ಳಿ ಗ್ರಾಮದಲ್ಲಿ ಬೃಹತ್ ಬಹಿರಂಗ ಸಭೆ ನಡೆಯಿತು. ಈ ಸಭೆಗೆ ಊರಿನ ಎಲ್ಲಾ ಪ್ರಮುಖರು, ಬಡರೈತರೂ, ಕೃಷಿಕೂಲೀಕಾರರು ಭಾಗವಹಿಸಿದ್ದರು. ಸಭೆಯನ್ನು ಉದ್ದೇಶಿಸಿ ಕಾ। ಎನ್.ಕೆ. ಉಪಾದ್ಯಾಯ ಹಾಗೂ ಕಾ। ಪಿ. ರಾಮಚಂದ್ರರಾವ್ ಮಾತನಾಡಿದರು. ಮೊದಲಿಗೆ ಯು. ದುರುಗಪ್ಪ ಸ್ವಾಗತಿಸಿದರು. ಕ್ರಾಂತಿಕಾರಿ ವಂದನೆಗಳನ್ನು ಕಾಂ॥ ಎಸ್. ಎಂ. ಕೊಟ್ರಯ್ಯ ಸಲ್ಲಿಸಿದರು.

“ಜಿಲ್ಲಾಧಿಕಾರಿಗಳಿಗೆ ಸಂಘದ ಮನವಿ”

ದಿನಾಂಕ 29-6-83 ರಂದು ಪ್ರಾಂತ ರೈತ ಸಂಘದ 10 ಜನ ಪ್ರತಿನಿಧಿಗಳು ಜಿಲ್ಲಾಧಿಕಾರಿಗಳಿಗೆ ಈ ಕೆಳಗಿನ ಬೇಡಿಕೆಗಳ ಈಡೇರಿಕೆಗಾಗಿ ಒತ್ತಾಯಿಸುವ ಕ್ರಮ ಕೈಗೊಂಡಿತ್ತು.

ಬೇಡಿಕೆಗಳು

1) ಸಣ್ಣ ಮತ್ತು ಮಧ್ಯಮ ರೈತರ ಸಾಲವನ್ನು ಮನ್ನಾ ಮಾಡಬೇಕು.

2) ಸಾಲ ಮರುಪಾವತಿಯ ಅವಧಿಯನ್ನು 2 ವರ್ಷಗಳವರೆಗೆ ಮುಂದೂಡಬೇಕು 12 ವರ್ಷ ಮೊರಿಟೋರಿಯಂ ಕೊಡಬೇಕು.

3) ಎಲ್ಲಾ ರೈತಸಂಘಗಳ, ರಾಜಕೀಯ ಪಕ್ಷಗಳ ಸಮಿತಿಯನ್ನು ರಚಿಸಿ, ಮೂರು ತಿಂಗಳಲ್ಲಿ ವರದಿಯನ್ನು ಪಡೆದರು. ಇದರ ನೇತೃತ್ವವನ್ನು ಪ್ರಾಂತ ಪಡೆದುಕೊಂಡು ಅದರ ಪ್ರಕಾರ ಮುಂದಿನ ಕ್ರಮ ಅನುಸರಿಸಬೇಕು.

4) ಈಗಾಗಲೇ ಸರಕಾರವು ಲಿಲಾವು ಹಾಕಲ್ಪಟ್ಟ ಜಮೀನುಗಳನ್ನು ರೈತರಿಗೆ ಹಿಂದುರಿಗಿಸಿ ಕೊಡಬೇಕು.

ಈ ಮೇಲಿನ ಬೇಡಿಕೆಗಳ ಮನವಿಯನ್ನು ಸಲ್ಲಿಸಲು ಹೋದಾಗ ಡಿ. ಸಿ. ಯವರು ಮುಕ್ತ ಚರ್ಚೆ ನಡೆಸಲು ನಿರಾಕರಿಸಿ, ಸರ್ವಾಧಿಕಾರದ ಪ್ರವೃತ್ತಿಯನ್ನು ತೋರಿಸಿದ್ದಕ್ಕಾಗಿ ಒಂದೂವರೆ ಗಂಟೆಗಳ ಕಾಲ ಡಿ.ಸಿ. ಯವರಿಗೆ ಘೇರಾವ್ ಹಾಕಿದರು. ನಂತರ ಡಿ.ಸಿ. ಯವರು ಬೇಡಿಕೆಗಳನ್ನು ಈಡೇರಿಸಲು ಸರಕಾರಕ್ಕೆ ಒತ್ತಾಯಿಸಲು ಆಶ್ವಾಸನೆ ಕೊಟ್ಟಿದ್ದಾರೆ. ಇವರ ನೇತೃತ್ವವನ್ನು ಜಿಲ್ಲಾ ಸಂಚಾಲಕ ಕಾಂ. ಪಿ. ಆರ್. ವೆಂಕಟೇಶ್ ವಹಿಸಿದ್ದರು.

ಕೋಲಾರ ಜಿಲ್ಲೆ

ಕರ್ನಾಟಕ ಪ್ರಾಂತ ರೈತ ಸಂಘದ ಕರೆಯಂತೆ ದಿನಾಂಕ 27-6-83ರಂದು ಶಿಡ್ಲಘಟ್ಟ ತಾಲ್ಲೂಕು ರೈತಸಂಘದ ಆಶ್ರಯದಲ್ಲಿ ತಾಲ್ಲೂಕು ಕಚೇರಿಯ ಮುಂಭಾಗದಲ್ಲಿ ಕೆಂಬಾವುಟಗಳೊಂದಿಗೆ ರೈತರು ಧರಣಿ ಸತ್ಯಾಗ್ರಹ ನಡೆಸಿದರು.

ಸರ್ಕಾರ ಸಾಲ ಮರುಪಾವತಿಯ ಅವಧಿಯನ್ನು ವಿಸ್ತರಿಸಬೇಕೆಂದೂ, ಪ್ರತಿ ಕುಟುಂಬಕ್ಕೆ ತಿಂಗಳಿಗೆ 3 ಕೆ.ಜಿ. ಆಹಾರ ಧಾನ್ಯ ಕೊಡುತ್ತಿರುವುದನ್ನು ಪರಿಶೀಲಿಸಿ ಕನಿಷ್ಠ 15 ಕೆ, ಜಿ. ಅಕ್ಕಿಯನ್ನು ನ್ಯಾಯಬೆಲೆ ಅಂಗಡಿಯ ಮೂಲಕ ವಿತರಣೆ ಮಾಡಬೇಕೆಂದು ಕೋರಿ ತಹಸೀಲ್‌ದಾರರ ಮೂಲಕ ಮನವಿ ಪತ್ರವನ್ನು ಸರ್ಕಾರಕ್ಕೆ ಕಳುಹಿಸಿ ಕೊಡಲಾಗಿದೆ.

ಚಿಂತಾಮಣಿ : ರೈತರಿಂದ ಧರಣಿ ಸತ್ಯಾಗ್ರಹ, ಮನವಿ

ರೈತರ ಬೇಡಿಕೆಗಳ ಬಗ್ಗೆ 8-6-83 ರಂದು ಚಿಂತಾಮಣಿ ತಾಲ್ಲೂಕು ಆಫೀಸ್ ಮುಂದೆ ಧರಣಿ ಸತ್ಯಾಗ್ರಹ ನಡೆಸಲಾಯಿತು. ಜಿಲ್ಲಾ ಕಾರ್ಯದರ್ಶಿ ಲಕ್ಷ್ಮಣರೆಡ್ಡಿ, ಜಿ. ವಿ. ಅಶ್ವಥನಾರಾಯಣರೆಡ್ಡಿ, ಶ್ರೀನಿವಾಸರೆಡ್ಡಿ, ಎನ್.ಸಿ. ದೊಡ್ಡಾರೆಡ್ಡಿ ಮುಂತಾದವರು ಮುಖಂಡತ್ವ ವಹಿಸಿದ್ದರು. ಅಲ್ಲಿ ದೆ ತಹಸೀಲ್ದಾರ್ ಅವರ ಮುಖಾಂತರ ಕೆಳಕಂಡ ಬೇಡಿಕೆಗಳನ್ನೊಳಗೊಂಡ ಮನವಿ ಪತ್ರವನ್ನು ಮುಖ್ಯಮಂತ್ರಿಯವರಿಗೆ ಕಳುಹಿಸಲಾಯಿತು.

ಬೇಡಿಕೆಗಳು :

1) ಸಹಕಾರಿ ಸಾಲ ವಸೂಲಾತಿಯನ್ನು 30-6-84ರವರೆಗೂ ಮುಂದೂಡಬೇಕು.

2) ಐ.ಆರ್.ಡಿ.ಪಿ. ಸಾಲಗಳನ್ನು ತಾಲ್ಲೂಕಿನ ಎಲ್ಲಾ ಪಂಚಾಯ್ತಿಗಳಿಗೂ ವಿಸ್ತರಿಸಬೇಕು.

3) ಪರಿಹಾರ ಕಾಮಗಾರಿಗಳಲ್ಲಿ ಸರ್ಕಾರ ನಿಗಧಿ ಪಡಿಸಿರುವ 6-50 ರೂಗಳನ್ನು ಕೆಲಸ ಮಾಡುವ ಕಾರ್ಮಿಕರಿಗೆ ಸಂದಾಯವಾಗುವಂತೆ ಮಾಡಬೇಕು.

4) ನೀರಿನ ತೆರಿಗೆ ಪೂರ್ಣ ರದ್ದುಗೊಳಿಸುವುದು.

5) ಬಂಜರು ಭೂಮಿಯನ್ನು ಭೂಮಿ ಹೀನರಿಗೆ ಹಂಚಿಕೆ ಮಾಡುವುದು.

6) ವಸತಿ ಹೀನರಿಗೆ ಜನತಾ ಯೋಜನಾನ್ವಯ ಮನೆಗಳನ್ನು ಕಟ್ಟಿಸಿಕೊಡುವುದು.

7) ಗ್ರಾಮಾಂತರ ಪ್ರದೇಶಗಳಲ್ಲಿ ಹೆಚ್ಚಿನ ನ್ಯಾಯ ಬೆಲೆ ಅಂಗಡಿಗಳನ್ನು ತೆಗೆದು ಹೆಚ್ಚಿನ ಧವಸ ಧಾನ್ಯಗಳನ್ನು ಹಂಚುವುದು.

8) ಕೃಷಿ ಕಾರ್ಮಿಕರಿಗೆ ಸರ್ಕಾರ ನಿಗಧಿ ಪಡಿಸಿರುವ ವೇತನವನ್ನು ನೀಡುವಂತೆ ಕ್ರಮ ಕೈಗೊಳ್ಳುವುದು.

ಸರ್ಕಾರಿ ರೇಷ್ಮೆ ಬಿತ್ತನೆ ಕೋಟೆಗಳಲ್ಲಿ ನಡೆಯುವ ಅನ್ಯಾಯವನ್ನು ತಡೆಗಟ್ಟಿ ಸಕಾಲಕ್ಕೆ ಮೊಟ್ಟೆಯನ್ನು ಸೂಕ್ತ ಬೆಲೆಯಲ್ಲಿ ರೈತರಿಗೆ ಅವಶ್ಯಕವಾದಷ್ಟು ಮೊಟ್ಟೆಯನ್ನು ಸರಬರಾಜು ಮಾಡುವುದು.

ಬತ್ತದ ಬೆಲೆ : ರೈತ ವಿರೋಧಿ ನೀತಿ

ಮತ್ತೆ ತನ್ನ ಹಳೆಯ ಧೋರಣೆಯಂತೆಯೇ ಕೃಷಿ ಬೆಲೆ ಆಯೋಗವು ಕೃಷಿ ಉತ್ಪನ್ನ ಖರ್ಚು ಮತ್ತು ಜೀವನಾವಶ್ಯಕ ಕೃಷಿ ಅವಶ್ಯಕ ವಸ್ತುಗಳ ಬೆಲೆ ಏರಿಕೆಗಳನ್ನು ಯಾವುದನ್ನು ಸರಿಯಾಗಿ ಗಮನಕ್ಕೆ ತೆಗೆದುಕೊಳ್ಳದೆ ಬತ್ತದ ಬೆಲೆಯನ್ನು ಬರುವ ಸುಗ್ಗಿಗೆ ನಿಗಧಿ ಮಾಡಿದೆ. ಬೆಲೆ ಏರಿಕೆಯನ್ನು ಹತೋಟಿಗೆ ತರುವ ಯಾವ ಕ್ರಮ ಅನುಸರಿಸದ ಕೇಂದ್ರ ಸರಕಾರ ಕೃಷಿ ಉತ್ಪತ್ತಿಗಳ ಬೆಲೆಯನ್ನು ನ್ಯಾಯಯುತ ರೀತಿಯಲ್ಲಿ ನಿಗದಿ ಪಡಿಸುವದಿಲ್ಲ ಎಂದು ಅಖಿಲ ಭಾರತ ಕಿಸಾನ್ ಸಭಾ ಪ್ರಧಾನ ಕಾರ್ಯದರ್ಶಿ ಕಾಂತಮಯ ಘೋಷ ಅವರು ಬಲವಾಗಿ ಖಂಡಿಸಿರುತ್ತಾರೆ. ಈ ಸಲ ಕೃಷಿ ಆಯೋಗವು ಬತ್ತಕ್ಕೆ ಪ್ರತಿ ಕ್ವಿಂಟಾಲಿಗೆ ರೂ 132 ನ್ನು ಮಾತ್ರ ಶಿಫಾರಸ್ಸು ಮಾಡಿದೆ, ಹೋದ ಸಲ ನಿಗದಿಪಡಿಸಿದ ಕ್ವಿಂಟಾಲಿಗೆ ರೂ. 122 ಕ್ಕಿಂತ ಪ್ರತಿಶತ 8ರಷ್ಟು ಮಾತ್ರ ಹೆಚ್ಚಿಸಿ ನಿಗದಿಪಡಿಸಲಾಗಿದೆ. ಇದೇ ಅವಧಿಯಲ್ಲಿ ಸಗಟು ಬೆಲೆ ಸೂಚ್ಯಾಂಕ ಪ್ರತಿಶತ 25ಕ್ಕಿಂತಲೂ ಹೆಚ್ಚು ಏರಿದರೆ ಮತ್ತು ಬಳಕೆದಾರರ ಬೆಲೆ ಸೂಚ್ಯಂಕ ಪ್ರತಿಶತ 50ಕ್ಕಿಂತಲೂ ಹೆಚ್ಚಿಗೆ ಏರಿವೆ. ಹೀಗಿರುವಾಗಲೂ ಕೃಷಿ ಬೆಲೆ ಆಯೋಗ ಈ ರೀತಿ ಅತೀ ಕೆಳಮಟ್ಟದಲ್ಲಿ ಬತ್ತದ ಬೆಲೆನಿಗದಿ ಮಾಡಿ ಶಿಫಾರಸು ಮಾಡಿರುವ ಅದರ ರೈತ ನಿಲುವನ್ನು ಮತ್ತೊಮ್ಮೆ ತೋರಿಸಿ ಕೊಟ್ಟಿದೆ. ಇದು ದೇಶದಲ್ಲಿ ಈಗ ಮೂಡಿರುವ ತೀವ್ರ ಆರ್ಥಿಕ ಬಿಕ್ಕಟ್ಟನ್ನು ರೈತರ ಹೆಗಲ ಮೇಲೆ ಹೇರುವ ಕ್ರೂರ ನೀತಿಯಾಗಿದೆ ಎಂದು ತೀವ್ರವಾಗಿ ಖಂಡಿಸಿರುವ ಅಖಿಲ ಭಾರತ ಕಿಸಾನ ಸಭಾ ಸಾಧಾರಣ ಬತ್ತಕ್ಕೆ ಇನ್ನು ಹೆಚ್ಚಿನ ಗುಣಮಟ್ಟದ ಬತ್ತಕ್ಕೆ ಅದಕ್ಕೆ ಸರಿಹೋಗುವಂತ ಹೆಚ್ಚಿನ ಬೆಲೆಗಳನ್ನು ನಿಗದಿಪಡಿಸಬೇಕೆಂದು

ಕೊರಿಯಾ ಸೌಹಾರ್ದ ಮಾಸ

ಪುನರೇಕೀಕರಣದ ಹೋರಾಟಕ್ಕೆ ಸಿ. ಪಿ. ಐ. (ಎಂ) ಬೆಂಬಲ ಮುಂದುವರಿಯುತ್ತದೆ

ಕೊರಿಯಾ ಕಾರ್ಮಿಕರ ಪಕ್ಷದ ಪ್ರಧಾನ ಕಾರ್ಯದರ್ಶಿ ಕಿಮ್ ಇಲ್ ಸುಂಗ್‌ರವರಿಗೆ ಸಿ.ಪಿ.ಐ. (ಎಂ)ನ ಪ್ರಧಾನ ಕಾರ್ಯದರ್ಶಿ ಇ.ಎಂ.ಎಸ್ ನಂಬೂದಿರಿಪಾಡ್‌ರವರು ಜೂನ್ 24ರಂದು ಕಳಿಸಿದ ಶುಭಾಶಯ ಸಂದೇಶದಲ್ಲಿ ಈ ರೀತಿ ಹೇಳಿದ್ದಾರೆ : “ಅಮೇರಿಕನ್ ಸಾಮ್ರಾಜ್ಯಶಾಹಿಯ ವಿರುದ್ಧ ಕೊರಿಯಾ ಜನತೆಯೊಂದಿಗೆ ಅಂತರ್‍ರಾಷ್ಟ್ರೀಯ ಸೌಹಾರ್ದತಾ ಮಾಸಾಚರಣೆಯ ಸಂದರ್ಭದಲ್ಲಿ ಮಾರ್ಕ್ಸ್‌ವಾದಿ ಕಮ್ಯುನಿಷ್ಟ್ ಪಕ್ಷದ ಕೇಂದ್ರ ಸಮಿತಿಯ ಪರವಾಗಿ ಕೊರಿಯಾ ಕಾರ್ಮಿಕರ ಪಕ್ಷ ಹಾಗೂ ಕೊರಿಯಾ ಜನವಾದಿ ಜನತಾ ಗಣತಂತ್ರ (ಡಿ.ಪಿ.ಆರ್.ಕೆ) ಕ್ಕೆ ಸೌಹಾರ್ದತೆ ಹಾಗೂ ಬೆಂಬಲ ವ್ಯಕ್ತಪಡಿಸುತ್ತಿದ್ದೇನೆ.

ಅಮೇರಿಕನ್ ಸಾಮ್ರಾಜ್ಯಶಾಹಿಗಳು ಡಿ.ಪಿ.ಆರ್.ಕೆ. ವಿರುದ್ಧ ಸೈನಿಕ ಪ್ರಚೋದನೆಗಳನ್ನು ಮುಂದುವರಿಸುತ್ತಿರುವ ಸಮಯದಲ್ಲಿ ಈ ವರ್ಷದ ಸೌಹಾರ್ದತಾ ಮಾಸ ಬರುತ್ತಿದೆ. ಅವರು “ಟೀಮ್ ಸ್ಪಿರಿಟ್ 83” ಎಂಬ ತಮ್ಮ ಕಾರ್ಯಕ್ರಮದ ನಂತರ ದಕ್ಷಿಣ ಕೊರಿಯಾದ ಕೈಗೊಂಬೆಗಳೊಡನೆ ಸೇರಿಕೊಂಡು ವ್ಯಾಪಕ ಪ್ರಮಾಣದ ಸೈನಿಕ ಕವಾಯತು ನಡೆಸುತ್ತಿದ್ದಾರೆ; ದಕ್ಷಿಣ ಕೋರಿಯಾದೊಳಗೆ ನ್ಯೂಟ್ರಾನ್ ಬಾಂಬುಗಳ ಪ್ರವೇಶವಾಗುತ್ತಿದೆ. ದಕ್ಷಿಣ ಕೋರಿಯಾದಲ್ಲಿರುವ ನ್ಯೂಕ್ಲಿಯರ್ ಅಸ್ತ್ರಗಳೊಂದಿಗೆ ಎಫ್-16 ಯುದ್ಧ ವಿಮಾನಗಳನ್ನು ಪಯೋಗಿಸಿಕೊಂಡು ಜಪಾನಿನೊಂದಿಗೆ ಜಂಟೀ ವೈಮಾನಿಕ ಕವಾಯತಿನ ಯೋಜನೆ ಅವರು ಹಾಕಿಕೊಂಡಿದ್ದಾರೆ. ಇವೆಲ್ಲಾ ಕೊರಿಯಾ ಪ್ರಾಯದ್ವೀಪದಲ್ಲಿ ಮಾತ್ರವಲ್ಲ ಸಮಸ್ತ ಏಷ್ಯಾದಲ್ಲೇ ಶಾಂತಿ ಹಾಗೂ ಸ್ಥಿರತೆಗೆ ಅಪಾಯವೊಡ್ಡಿರುವ ಯುದ್ಧ ಚಟುವಟಿಕೆಗಳು.

ಅದೇ ರೀತಿ ಕೊರಿಯಾದ ದಕ್ಷಿಣದಲ್ಲಿ ಎಲ್ಲಾ ಪ್ರಜಾಸತ್ತಾತ್ಮಕ ಹಕ್ಕುಗಳನ್ನು ದಮನಮಾಡಿ ಅವನ್ನೆಲ್ಲಾ ಕ್ರೂರವಾಗಿ ಹತ್ತಿಕ್ಕುತ್ತಿರುವ ಫ್ಯಾಸಿಸ್ಟ್ ಕೈಗೊಂಬೆ ಆಡಳಿತದ ವಿರುದ್ಧ ಜನತೆಯ ಹೋರಾಟಗಳು ಹೆಚ್ಚುತ್ತಿರುವ ಸಮಯದಲ್ಲಿ, ಈ ವರ್ಷದ ಸೌಹಾರ್ದಮಾಸ ಬರುತ್ತಿದೆ.

ಇತ್ತೀಚೆಗೆ ಡಿ.ಪಿ.ಆರ್.ಕೆ ಗೆ ಭೇಟಿಯಿತ್ತ ನಮ್ಮ ಪಕ್ಷದ ಪ್ರತಿನಿಧಿ ಮಂಡಲದ ಸದಸ್ಯರು ಡಿ.ಪಿ.ಆರ್.ಕೆ ಜನತೆ ಸಮಾಜವಾದೀ ರಚನೆಯಲ್ಲಿ ಹಾಗೂ ತಮ್ಮ ಜೀವನ ಸುಧಾರಿಸುವಲ್ಲಿ ಅಗಾಧ ಮುನ್ನಡೆಸಾಧಿಸಿರುವುದನ್ನು ಕಣ್ಣಾರೆ ಕಂಡಿದ್ದಾರೆ. ಈ ಸಾಧನೆಗಳನ್ನು ಉಳಿಸಿ ಅದನ್ನು ಮತ್ತಷ್ಟು ಬೆಳೆಸಿಕೊಂಡು ಹೋಗಬೇಕೆಂಬ ಡಿ.ಪಿ.ಆರ್.ಕೆ ಜನತೆಯ ದೃಢನಿರ್ಧಾರಕ್ಕೆ ನಮ್ಮ ಪಕ್ಷದ ಬೆಂಬಲವಿದೆ.

ಅಮೇರಿಕಾದ ಸೈನ್ಯ ಶಸ್ತ್ರಾಸ್ತ್ರಗಳು ಹಾಗೂ ಸೈನಿಕ ನೆಲೆಗಳನ್ನು ಕೊರಿಯಾದ ದಕ್ಷಿಣ ಭಾಗದಿಂದ ವಾಪಾಸು ಪಡೆದು ಅಲ್ಲಿ ಪ್ರಜಾಪ್ರಭುತ್ವ ಪುನಃ ಸ್ಥಾಪಿಸಬೇಕೆಂಬ ಪೂರ್ವ ಶರತ್ತಿನ ಮೇಲೆ ನಿಮ್ಮ ನೇತೃತ್ವದಲ್ಲಿ ಕೊರಿಯಾ ಕಾರ್ಮಿಕರ ಪಕ್ಷ ಕೊರಿಯಾದ ಶಾಂತಿಯುತ ಪುನರೇಕೀಕರಣದ ಬಗ್ಗೆ ಮುಂಡಿಸಿರುವ ಸೂಚನೆಗಳಿಗೆ ತನ್ನ ಬೆಂಬಲವನ್ನು ಸಿ.ಪಿ.ಐ. (ಎಂ) ಮತ್ತೊಮ್ಮೆ ದೃಢಪಡಿಸುತ್ತದೆ.

ಕೊರಿಯಾದ ಶಾಂತಿಯುತ ಪುನರೇಕೀಕರಣ ಹಾಗೂ ಡಿ.ಪಿ.ಆರ್ ಕೆ.ಯ ಸಮಾಜವಾದ ಕಟ್ಟುವ ಕೊರಿಯಾ ಜನತೆಯ ಹೋರಾಟಕ್ಕೆ ನಮ್ಮ ಪಕ್ಷ ಮುಂದೆಯೂ ಬೆಂಬಲ ಕೊಡುತ್ತದೆ ಎಂಬುದರ ಬಗ್ಗೆ ಭರವಸೆ ನೀಡುತ್ತೇವೆ.

(3ನೇ ಪುಟದಿಂದ)

ಮತ್ತೆರಡನ್ನು ಕಳೆದುಕೊಂಡಿತು. ಕಾಂಗ್ರೆ, ಇಂಡಿಯನ್ ಯೂನಿಯನ್ ಮುಸ್ಲಿಂ ಲೀಗ್ ಮತ್ತು ಸಿಪಿಐ (ಎಂ) ತಮ್ಮ ಗೆಳೆಯರೊಂದಿಗೆ ಈಗ ಚುನಾವಣೆಯನ್ನೆದುರಿಸಿದರೆ ಸಿಪಿಐ (ಎಂ) ರಂಗ ಬಹುಮತ ಪಡೆಯುತ್ತದೆಂದು ಧೈರ್ಯದಿಂದ ಹೇಳಬಹುದು.

ಕ್ರಿಶ್ಚಿಯನ್ನರ ಪ್ರಾಬಲ್ಯವಿರುವ ಮೂರು ಜಿಲ್ಲೆಗಳಲ್ಲಿ ನಮ್ಮ ಬಲ ಹೆಚ್ಚಿಸಿಕೊಂಡಿದ್ದೇವೆ. 1980–82ರ ಚುನಾವಣೆ ಇದನ್ನು ತೋರಿಸಿದೆ.

ಜಾತಿಯ ತಳಹದಿಯಲ್ಲಿ ಸಂಘಟಿತವಾಗಿರುವ ಸಂಘಟನೆ ಮತ್ತು ಪಕ್ಷಗಳೆಂದರೆ ಎನ್ ಡಿ ಪಿ ಮತ್ತು ಎಸ್‌ಆರ್‌ಪಿಗಳೆಂದು ಹೆಸರು ಪಡೆದಿರುವ ನಾಯರ್ ಹಾಗೂ ಉರಭುವಾ ಪಕ್ಷಗಳು. ಈ ಎರಡೂ ಪಕ್ಷಗಳು ವಿಶಾಸಲಾತಿ ಸಮಸ್ಯೆಯನ್ನೆತ್ತಿವೆ. ಆರ್ಥಿಕ ಮತ್ತು ಜಾತೀಯ ಆಧಾರದ ಮೇಲಿನ ಎರಡು ಘೋಷಣೆಗಳಿಂದ ಇವರು ಮತದಾರರನ್ನೆದುರಿಸಿರೆಂದು ಸಿಪಿಐ (ಎಂ)ನ್ನು ಆಹ್ವಾನಿಸಿದರು. ತಮ್ಮ ಬೆಂಬಲಿಗರೊಂದಿಗೆ ಕಾಂಗ್ರೆ ಜೊತೆಯಲ್ಲಿ ಸೇರಿ 1980–82ರ ಚುನಾವಣೆಯಲ್ಲಿ ಸ್ಪರ್ಧಿಸಿದರು. ಈ ಎರಡೂ ಜಾತಿಗಳ ಮುಖಂಡರ ಮೇಲೆ ತಮಗೆ ವಿಶ್ವಾಸವಿಲ್ಲೆಂಬುದನ್ನು ಇವರ ಬೆಂಬಲಿಗರು ತೋರಿಸಿಕೊಟ್ಟಿರುವುದನ್ನು ಚುನಾವಣೆಯ ಫಲಿತಾಂಶದಲ್ಲಿ ಕಾಣಬಹುದು. ಕಾಂಗ್ರೆಸ್–ಲೀಗಿನ ಬೆಂಬಲವಿಲ್ಲದೆ ಅವರು ಸ್ಪರ್ಧಿಸಿದರೆ ಒಬ್ಬರೂ ಆರಿಸಿ ಬರುವುದಿಲ್ಲ.

ಕಾಂಗ್ರೆಸ್ ಜವಾಬ್ದಾರಿ

ಬದಲಾವಣೆ ಹೇಗೆ ಬಂತು

ರಾಜ್ಯದ ರಾಜಕೀಯದಲ್ಲಿ ಈ ರೀತಿಯ ಬದಲಾವಣೆಯನ್ನುಂಟು ಮಾಡಲು, ಜಾತಿ–ಧರ್ಮದ ಕೋಟೆಯನ್ನು ಕುಸಿದುಹಾಕಲು ಹೇಗೆ ಸಾಧ್ಯವಾಯಿತು.

ಅವಿಭಾಜಿತ ಸಿಪಿಐ ಮತ್ತು ಸಿಪಿಐ (ಎಂ) ಪಕ್ಷಗಳ ಮುಖಂಡತ್ವದ, ಎಡರಂಗ ಜಾತೀಯ ಪಕ್ಷಗಳಿಗಿಂತ "ರಾಷ್ಟ್ರೀಯ" ಪಕ್ಷಗಳೇ ಉತ್ತಮವೆಂಬ ಹಿಂದಿನಿಂದಲೂ ಬಂದಿರುವ ತಿಳುವಳಿಕೆಯನ್ನು ಒಪ್ಪಿಕೊಳ್ಳಲು ನಿರಾಕರಿಸಿವೆ. ಹಿಂದುಳಿದವರನ್ನು ಅಲ್ಪ ಮತಸ್ಥರನ್ನೂ ಪ್ರತಿನಿಧೀಕರಿಸುವ ಕೆಲವು ಜಾತೀಯ ಮತೀಯ ಪಕ್ಷಗಳೂ, ಸಂಘಟನೆಗಳೂ "ಪುರೋಗಾಮಿ" ಲಕ್ಷಣಗಳನ್ನೊಳಗೊಂಡಿವೆಂಬ ಅಭಿಪ್ರಾಯವನ್ನು ಎಡ ಚಳುವಳಿ ಅಲ್ಲಗಳೆದಿದೆ. "ಜಾತೀಯ" ವಾಗಿದೆಯೋ ಅಥವಾ "ರಾಷ್ಟ್ರೀಯ" ವಾಗಿದೆಯೋ ಎಂಬ ತಳಹದಿಯ ಮೇಲೆ ಒಂದು ರಾಜಕೀಯ ಪಕ್ಷವನ್ನು ಅಳೆಯದೆ ಅದು ಎಂತಹ ರಾಜಕೀಯ, ಆರ್ಥಿಕ ಧೋರಣೆಗಳನ್ನನುಸರಿಸುತ್ತಿದೆಂದು ನೋಡುವುದಗತ್ಯ.

ಸ್ವಾತಂತ್ರ್ಯ ಹೋರಾಟದ ಸಮಯದಲ್ಲಿ ಬ್ರಿಟಿಷರ ಮತ್ತು ರಾಜ ಮಹಾರಾಜರ ಆಡಳಿತೆಯ ಅನಂತರ ಕಾಂಗ್ರೆಸ್ಸಿನ ಆಡಳಿತೆಯ ಕುರಿತು ಒಂದು ರಾಜಕೀಯ ಪಕ್ಷದ ನಿಲುವು ಅತಿ ಮಹತ್ವದ್ದಾಗಿದೆ. ಮತ್ತೊಂದು ಯಾವುದೆಂದರೆ ರೈತರು, ಕಾರ್ಮಿಕ ವರ್ಗ ಮತ್ತು ಇತರ ವಿಭಾಗದ ಜನರ ಬೇಡಿಕೆಗಳು, ಹೋರಾಟಗಳ ಕುರಿತು ಅದರ ನಿಲುವು ಹೇಗಿದೆಯೆಂಬುದು ಮುಖ್ಯವಾಗಿದೆ.

ಪರಿಸ್ಥಿತಿಯ ಸುಧಾರಣೆ ಮಾಡುವುದು, ಮತ್ತು ಹಿಂದುಳಿದ ಹಿಂದೂ ಜನರ, ಹಿಂದುಯೇತರ ಜಾತಿಯವರಿಗೆ ರಕ್ಷಣೆ ನೀಡುವುದು ಅತ್ಯಗತ್ಯ. ಈ ಎರಡೂ ಸಮಸ್ಯೆಗಳ ಕುರಿತು ಎಡ ಚಳುವಳಿ ಪ್ರಜಾಪ್ರಭುತ್ವ ನಿಲುವೇ ನಿರ್ಧರಿಸುವಾಗ, ಈ ಎರಡೂ ಗುಂಪುಗಳನ್ನು ಸಾರ್ವತ್ರಿಕ ಪ್ರಜಾಪ್ರಭುತ್ವ ಚಳುವಳಿಯಿಂದ ದೂರ ಇಡುವ ಪ್ರಯತ್ನವನ್ನು ಎದುರಿಸಬೇಕು. ಜಾತೀಯತೆ ಮತ್ತು ಮತೀಯತೆಯನ್ನು ಯಾವ ಆಧಾರವಿಲ್ಲದೆ ಎದುರಿಸದೆ ವರ್ಗ ಹೋರಾಟದ ಒಂದು ಅಂಗವೆಂದು ತಿಳಿದು ಎದುರಿಸಬೇಕು.

ಸಿಪಿಐ (ಎಂ) ನ್ನು ವಿರೋಧಿಸುವ ಸಲುವಾಗಿ ಕಾಂಗ್ರೆಸ್ಸು ಹಳೇ ಕಾಲದಲ್ಲಿಯಂತೆಯೇ ಜಾತೀಯ ಧಾರ್ಮಿಕ ಶಕ್ತಿಗಳನ್ನು ಪಯೋಗಿಸುತ್ತಿದೆ. 1959–60ರ ಕಮ್ಯುನಿಸ್ಟ್ ವಿರೋಧಿ ರಂಗದಂತೆಯೇ ಈಗಿನ ಯು.ಡಿ.ಎಫ್ ಧಾರ್ಮಿಕರ, ಜಾತೀವಾದಿಗಳ ಗುಂಪಾಗಿರುತ್ತದೆ. ಇವರ ಬೆಂಬಲವಿಲ್ಲದೆ ಕಾಂಗ್ರೆ ಪಕ್ಷ ನಿಲ್ಲಲು ಸಾಧ್ಯವಿಲ್ಲ.

ಆರ್. ಎಸ್. ಎಸ್. ಜೊತೆಯಲ್ಲಿ ಕಾಂಗ್ರೆ ಸಂಬಂಧ ಬಲವಾಗಿದೆ. 1970ರ ಪ್ರಾರಂಭದಲ್ಲಿ ತಲ್ಲಿಚೇರಿಯಲ್ಲಿ ನಡೆದ ಜಾತೀಯ ಗಲಭೆಯಲ್ಲಿ ಆರ್. ಎಸ್. ಎಸ್. ಕೈವಾಡವಿತ್ತು. ಹೋದ ಡಿಸೆಂಬರಿನಲ್ಲಿ ಆಲೆಪ್ಪಿ ಮತ್ತು ತ್ರಿವೇಂಡ್ರಮ್‌ನಲ್ಲಿ ಇದೇ ಶಕ್ತಿಗಳು ದಂಗೆ ಎಬ್ಬಿಸಿವೆ.

ತಾನು ಅಧಿಕಾರದಲ್ಲುಳಿಯುವುದರ ಸಲುವಾಗಿ ಕಾಂಗ್ರೆ ಮುಖಂಡತ್ವದಲ್ಲಿರುವ ಸರಕಾರ ಒಂದಲ್ಲೊಂದು ಜಾತೀಯ ಪಕ್ಷಗಳಿಗೆ ಅನುಕೂಲತೆ ಮಾಡಿಕೊಡುತ್ತಿದೆ.

ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಾರ್ಟಿಯ ಕರೆ

ಕೇರಳದ ಕಾಂಗ್ರೆ ಪಕ್ಷ ಇಂಥ ಜಾತೀವಾದಿಗಳಿಂದ ಕೂಡಿದೆ. ಜಾತೀವಾದಿ ಮುಖಂಡರೆಲ್ಲ ಸರಕಾರವನ್ನು ಬೆದರಿಸಿ ಹಣ ಲೂಟಿ ಮಾಡುತ್ತಿದ್ದಾರೆ. ಆದರೆ ಈ ಜಾತಿಗಳಿಗೆ, ಧರ್ಮಗಳಿಗೆ ಸೇರಿದ ಬಹು ಸಂಖ್ಯಾತ ಜನರೆಲ್ಲ ನಿರುದ್ಯೋಗ, ಕರಭಾರ, ಸಂಬಳ, ಸಾಲದ ಹೊರೆ ಮೊದಲಾದ ಸಮಸ್ಯೆಗಳನ್ನೆದುರಿಸಬೇಕಾಗಿದೆ. ಜನರೆದುರಿಸುತ್ತಿರುವ ಜೀವಂತ ಸಮಸ್ಯೆಗಳಿಗೆ ಪರಿಹಾರ ಒದಗಿಸಲು ಈ ಮುಖಂಡರು ಮುಂದೆ ಬರುತ್ತಿಲ್ಲ. ಆದ್ದರಿಂದ ಜಾತೀಯತೆ ಅಳಿಯಬೇಕಾದರೆ ಎಡ ಪ್ರಜಾಪ್ರಭುತ್ವ ರಂಗ ಬಲಗೊಳ್ಳುವುದಗತ್ಯ, ಜನರೆದುರಿಸುತ್ತಿರುವ ಸಮಸ್ಯೆಗಳಿಗಾಗಿ ಸಂಯುಕ್ತ ಹೋರಾಟ ನಡೆಯುವುದಗತ್ಯ.

ಡೊನೇಷನ್ - ಕ್ಯಾಪಿಟೇಷನ್ ಹಾವಳಿ ವಿರುದ್ಧ ಚಳುವಳಿ
ದಶಲಕ್ಷ ಸಹಿ ಸಂಗ್ರಹಕ್ಕೆ ಎಸ್. ಎಫ್. ಐ. ಕರೆ

ಕರ್ನಾಟಕ ರಾಜ್ಯದಲ್ಲಿ ವಿದ್ಯಾಭ್ಯಾಸದ ವ್ಯಾಪಾರೀಕರಣವನ್ನು ತಡೆಗಟ್ಟಲು ಡೊನೇಷನ್ ಮತ್ತು ಕ್ಯಾಪಿಟೇಷನ್ ಶುಲ್ಕ ವಸೂಲಿಯನ್ನು ಸಂಪೂರ್ಣವಾಗಿರದ್ದು ಮಾಡಬೇಕೆಂದು ಎಸ್.ಎಫ್.ಐ, ರಾಜ್ಯ ಸಮಿತಿಯು ಸರ್ಕಾರವನ್ನು ಒತ್ತಾಯಿಸಿದೆ. ಜನಸಾಮಾನ್ಯರಿಂದ ತೆರಿಗೆಯ ಮೂಲಕ ವಸೂಲಿಯಾದ ಸರ್ಕಾರದ ಬೊಕ್ಕಸದ ಹಣದಿಂದ ಶೇ. 93ರಷ್ಟು ಅನುದಾನವನ್ನು ಪಡೆದೂ ಬಡವಿದ್ಯಾರ್ಥಿಗಳನ್ನು ಮತ್ತು ಪೋಷಕರನ್ನು ನಾನಾ ರೀತಿಯಲ್ಲಿ ಸುಲಿಗೆ ಮಾಡುತ್ತಿರುವ ಖಾಸಗಿ ವಿದ್ಯಾಸಂಸ್ಥೆಗಳನ್ನು ಕೂಡಲೇ ರಾಷ್ಟ್ರೀಕರಿಸಲು ಸರ್ಕಾರವು ಮುಂದೆ ಬರಬೇಕೆಂದು ಭಾರತ ವಿದ್ಯಾರ್ಥಿ ಫೆಡರೇಷನ್ (ಎಸ್.ಎಫ್.ಐ.) ಮನವಿ ಮಾಡಿದೆ.

1983ರ ವಿಧಾನಸಭಾ ಚುನಾವಣೆಯಲ್ಲಿ ಕ್ಯಾಪಿಟೇಷನ್ ಶುಲ್ಕವನ್ನು ರದ್ದು ಮಾಡುವುದಾಗಿ ಭರವಸೆ ನೀಡಿ ಬಂದ ಜನತಾ ಸರ್ಕಾರವು ತನ್ನ ಆಶ್ವಾಸನೆಯನ್ನು ಈಡೇರಿಸಲು ವಿಫಲವಾಗಿರುವುದು ವಿಷಾದನೀಯವಾಗಿದೆ. ಆಂಧ್ರಪ್ರದೇಶದ ಎನ್. ಟಿ. ರಾಮರಾವ್ ಸರ್ಕಾರವು ಕ್ಯಾಪಿಟೇಷನ್ ಶುಲ್ಕವನ್ನು ಸಂಪೂರ್ಣವಾಗಿ ರದ್ದು ಮಾಡಿ ಆಜ್ಞೆ ಹೊರಡಿಸಿರುವಾಗ ಕರ್ನಾಟಕದ ಜನತಾ ಸರ್ಕಾರವು ಕ್ಯಾಪಿಟೇಷನ್ ಶುಲ್ಕವನ್ನು ಕಾನೂನು ಬದ್ಧಗೊಳಿಸಿದೆ. ಸರ್ಕಾರವೇ ನೇಮಿಸಿದ ಆರೋಗ್ಯಮಂತ್ರಿ ಪಿ.ಜಿ.ಆರ್. ಸಿಂಧ್ಯಾ ಸಮಿತಿಯ ವರದಿಯು ಇನ್ನೂ ಗುಪ್ತವಾಗಿಯೇ ಉಳಿದಿದೆ. ಕ್ಯಾಪಿಟೇಷನ್ ಶುಲ್ಕವನ್ನು ರದ್ದು ಮಾಡಬೇಕೆಂದು ಈ ಸಮಿತಿ ಶಿಫಾರಸ್ಸು ಮಾಡಿದ್ದರೂ ಮಂತ್ರಿಮಂಡಲ ಮುಂದೆ ಬಂದಿಲ್ಲ, ಪಟ್ಟಭದ್ರ ಹಿತಾಸಕ್ತಿಗಳ ಒತ್ತಡಕ್ಕೆ ಮಣಿದು ಕ್ಯಾಪಿಟೇಷನ್ ಶುಲ್ಕವನ್ನು ರದ್ದುಗೊಳಿಸಲು ಸರ್ಕಾರ ಹಿಂಜರಿಯುತ್ತಿರುವುದನ್ನು ಎಸ್.ಎಫ್.ಐ. ರಾಜ್ಯ ಸಮಿತಿಯು ಖಂಡಿಸಿದೆ. ಜನತಾ ಸರ್ಕಾರದ ಈ ತೀರ್ಮಾನದ ಬಗ್ಗೆ ಜುಲೈ 5 ಮತ್ತು 6 ರಂದು ಬೆಂಗಳೂರಿನಲ್ಲಿ ಅಖಿಲ ಭಾರತ ಅಧ್ಯಕ್ಷ ಕಾಂ|| ಎಂ.ಎ. ಬೇಬಿಯವರ ಸಮ್ಮುಖದಲ್ಲಿ ನಡೆದ ಎಸ್.ಎಫ್.ಐ. ರಾಜ್ಯ ಸಮಿತಿ ಸಭೆಯು ತನ್ನ ತೀವ್ರ ಅಸಮಾಧಾನ ವ್ಯಕ್ತಪಡಿಸಿದೆ.

ಡೊನೇಷನ್—ಕ್ಯಾಪಿಟೇಷನ್ ಶುಲ್ಕವನ್ನು ಸಂಪೂರ್ಣವಾಗಿ ರದ್ದುಗೊಳಿಸುವಂತೆ ರಾಜ್ಯಸರ್ಕಾರವನ್ನು ಒತ್ತಾಯಿಸಲು ರಾಜ್ಯದಾದ್ಯಂತ ವಿದ್ಯಾರ್ಥಿಗಳು ಮತ್ತು ಪೋಷಕರಿಂದ ಹತ್ತು ಲಕ್ಷ ಸಹಿ ಸಂಗ್ರಹಿಸಿ ಸೆಪ್ಟೆಂಬರ್ 1 ರಂದು ವಿಧಾನಸೌಧಕ್ಕೆ ಮೆರವಣಿಗೆಯ ಮೂಲಕ ಕೊಂಡೊಯ್ದು ಮುಖ್ಯಮಂತ್ರಿಗಳಿಗೆ ಮನವಿ ಸಲ್ಲಿಸಲು ತೀರ್ಮಾನಿಸಿದೆ.

ಬೆಂಗಳೂರು ನಗರದಲ್ಲಿ ಜುಲೈ 7 ರಿಂದ 14ರ ವರೆಗೆ ಡೊನೇಷನ್-ಕ್ಯಾಪಿಟೇಷನ್ ವಿರೋಧಿ ಸಪ್ತಾಹ ಆಚರಿಸಿ ಹಲವಾರು ಶಾಲಾ-ಕಾಲೇಜುಗಳ ಮುಂದೆ ಮತಪ್ರದರ್ಶನ, ಸಭೆಗಳನ್ನು ನಡೆಸಲಾಯಿತು.

'ಸರ್ವರಿಗೂ ಶಿಕ್ಷಣ; ಸರ್ವರಿಗೂ ಉದ್ಯೋಗ' ಚಳುವಳಿ :

1981ರ ಸೆಪ್ಟಂಬರ್ 15ರಂದು ನವದೆಹಲಿಯಲ್ಲಿ 'ಸರ್ವರಿಗೂ ಶಿಕ್ಷಣ; ಸರ್ವರಿಗೂ ಉದ್ಯೋಗ' ಎಂಬ ಘೋಷಣೆಯಡಿಯಲ್ಲಿ ಎಸ್.ಎಫ್.ಐ; ಡಿವೈಎಫ್ಐ ಮತ್ತಿತರ ವಿದ್ಯಾರ್ಥಿ-ಯುವಜನ ಸಂಘಟನೆಗಳ ನೇತೃತ್ವದಲ್ಲಿ ನಡೆಸಲಾದ ಚಾರಿತ್ರಿಕ ಮತ ಪ್ರದರ್ಶನದ ಮಹತ್ವವನ್ನು ಎತ್ತಿಹಿಡಿಯಲು ಮತ್ತು ಈ ಐತಿಹಾಸಿಕ ಚಳುವಳಿಯನ್ನು ಮುಂದೆ ಕೊಂಡೊಯ್ಯಲು ಎಸ್.ಎಫ್.ಐ. ಕೇಂದ್ರಸಮಿತಿ ಕರೆ ನೀಡಿದೆ.

ಈ ಕಾರ್ಯಕ್ರಮದ ಅಂಗವಾಗಿ ಕರ್ನಾಟಕ ರಾಜ್ಯದ ವಿದ್ಯಾರ್ಥಿ-ಯುವಜನ ಸಮುದಾಯದ ದೀರ್ಘಕಾಲದ ಬೇಡಿಕೆಗಳನ್ನು ಪಡೆಯಲು ರಾಜ್ಯದಾದ್ಯಂತ ಚಳುವಳಿ ಕಾರ್ಯಕ್ರಮ ರೂಪಿಸಲಾಗಿದೆ, ಡೊನೇಷನ್-ಕ್ಯಾಪಿಟೇಷನ್ ಶುಲ್ಕದ ರದ್ದತಿಯೂ ಸೇರಿ ಒಟ್ಟು 25 ಬೇಡಿಕೆಗಳ ಪಟ್ಟಿಯ ಮನವಿಯೊಂದನ್ನು ಎಸ್.ಎಫ್.ಐ. ರಾಜ್ಯ ಸಮಿತಿಯ ನಿಯೋಗವೊಂದು ಜುಲೈ 7ರಂದು ವಿದ್ಯಾಮಂತ್ರಿ ಶ್ರೀ ಬಿ. ರಾಚಯ್ಯನವರಿಗೆ ಸಲ್ಲಿಸಿದೆ.

ಈ ಬೇಡಿಕೆಗಳನ್ನು ಜನಪ್ರಿಯಗೊಳಿಸಲು ಮತ್ತು ಇವುಗಳನ್ನು ಈಡೇರಿಸುವಂತೆ ಸರ್ಕಾರವನ್ನು ಒತ್ತಾಯಿಸಲು ಆಗಸ್ಟ್ 1ರಂದು ರಾಜ್ಯದಾದ್ಯಂತ 'ಬೇಡಿಕೆ ದಿನಾಚರಣೆ' ಆಚರಿಸಲಾಗುವುದು. ಅಂದು ಎಸ್.ಎಫ್.ಐ.ಶಾಖೆಗಳು ಶಾಲಾ-ಕಾಲೇಜುಗಳ ಮುಂದೆ ಮತಪ್ರದರ್ಶನ ನಡೆಸುತ್ತವೆ. ಸೆಪ್ಟಂಬರ್ 1 ರಂದು ಎಲ್ಲಾ ತಾಲ್ಲೂಕು ಕೇಂದ್ರಗಳಲ್ಲಿ ತಾಲ್ಲೂಕು ಕಚೇರಿಗಳಿಗೆ ವಿದ್ಯಾರ್ಥಿಗಳ ಮೆರವಣಿಗೆ ಕೊಂಡೊಯ್ದು ಮನವಿ ಅರ್ಪಿಸಲಾಗುವುದು.

ಸೆಪ್ಟಂಬರ್ 15ರ ಚಾರಿತ್ರಿಕ ದಿನದಂದು ಜಿಲ್ಲಾ ಕಛೇರಿಗಳ ಮುಂದೆ ಸಾಮೂಹಿಕ ಧರಣಿ ಕಾರ್ಯಕ್ರಮ ನಡೆಸಲಾಗುವುದು. ಡೊನೇಷನ್-ಕ್ಯಾಪಿಟೇಷನ್ ಫೀ ವಸೂಲಿ ರದ್ಧತಿಯೂ ಸೇರಿದಂತೆ ವಿದ್ಯಾರ್ಥಿ ಯುವಜನರ ಈ ಬೇಡಿಕೆಗಳನ್ನು ಪಡೆಯಲು ಇತರೆ ವಿದ್ಯಾರ್ಥಿ-ಯುವಜನ ಸಂಘಟನೆಗಳನ್ನು ಒಟ್ಟುಗೂಡಿಸಿ ರಾಜ್ಯದಾದ್ಯಂತ ವ್ಯಾಪಕ ಚಳುವಳಿ ನಡೆಸಲು ಎಸ್.ಎಫ್.ಐ. ರಾಜ್ಯ ಸಮಿತಿಯು ನಿರ್ಧರಿಸಿದೆ,

ಪುರಸಭಾ-ನಗರಸಭಾ ಚುನಾವಣೆಗಳು

ಮತದಾನದ ವಯೋಮಿತಿಯನ್ನು 18 ವರ್ಷಕ್ಕಿಳಿಸಿ 12 ವರ್ಷಗಳಿಂದ ತಡೆಹಿಡಿಯಲಾಗಿದ್ದ ಸ್ಥಳೀಯ-ಸಂಸ್ಥೆಗಳಿಗೆ ಚುನಾವಣೆ ನಡೆಸುತ್ತಿರುವ ಜನತಾ ಸರ್ಕಾರವನ್ನು ಎಸ್.ಎಫ್.ಐ ರಾಜ್ಯಸಮಿತಿ ಅಭಿನಂದಿಸಿದೆ.

ರಾಜ್ಯದ ವಿದ್ಯಾರ್ಥಿ-ಯುವಜನ ಸಮುದಾಯವು ಸರ್ಕಾರದ ಈ ನಿರ್ಧಾರವನ್ನು ಎತ್ತಿ ಹಿಡಿದು ಮುಂಬರುವ ಪುರಸಭಾ-ನಗರಸಭಾ ಚುನಾವಣೆಗಳಲ್ಲಿ ಸರ್ವಾಧಿಕಾರಿ ಕಾಂಗ್ರೆಸ್ (ಐ) ಪಕ್ಷವನ್ನು ಸಂಪೂರ್ಣವಾಗಿ ಸೋಲಿಸಲು ಶ್ರಮಿಸಬೇಕೆಂದು ಕರೆ ನೀಡಿದೆ. ಜನತಾ, ಸಿ.ಪಿ.ಐ (ಎಂ) ಮತ್ತು ಸಿ.ಪಿ.ಐ. ಪಕ್ಷಗಳ ಅಭ್ಯರ್ಥಿಗಳನ್ನು ಬೆಂಬಲಿಸಲು ಎಸ್.ಎಫ್.ಐ ನಿರ್ಧರಿಸಿದೆ.

ನೆಲ್ಸನ್ ಮಂಡೇಲಾ ಬಿಡುಗಡೆಗೆ ಸಹಿ ಸಂಗ್ರಹ:

ಎಸ್.ಎಫ್.ಐ ಕೇಂದ್ರ ಸಮಿತಿಯ ಕರೆಯ ಮೇರೆಗೆ ಕಳೆದ ಹತ್ತೊಂಬತ್ತು ವರ್ಷಗಳಿಂದ ಕಾರಾಗೃಹದಲ್ಲಿರುವ ದಕ್ಷಿಣ ಆಫ್ರಿಕಾದ ರಾಷ್ಟ್ರೀಯ ವಿಮೋಚನಾ ಚಳುವಳಿಯ ನೇತಾರ ನೆಲ್ಸನ್ ಮಂಡೇಲಾರವರನ್ನು ಬಿಡುಗಡೆ ಮಾಡಬೇಕೆಂದು ಮತ್ತು ಆಫ್ರಿಕನ್ ನ್ಯಾಷನಲ್ ಕಾಂಗ್ರೆಸ್‌ನ ಚಳುವಳಿಕಾರರ ಹತ್ಯೆಯನ್ನು ನಿಲ್ಲಿಸಬೇಕೆಂದು ಒತ್ತಾಯಿಸಲು ವಿದ್ಯಾರ್ಥಿಗಳು ಮತ್ತು ಸಾರ್ವಜನಿಕರಿಂದ ಸಹಿ ಸಂಗ್ರಹಿಸಲಾಗುವುದು, ನಂತರ ಎಸ್.ಎಫ್. ಐ. ಕೇಂದ್ರಸಮಿತಿಯು ವಿಶ್ವಸಂಸ್ಥೆಯ ಪ್ರತಿನಿಧಿಗೆ ಈ ಸಹಿಗಳನ್ನೊಳಗೊಂಡ ಮನವಿ ಸಲ್ಲಿಸುತ್ತದೆ.

ನೆಲ್ಸನ್ ಮಂಡೇಲಾರವರ ಹುಟ್ಟುದಿನವಾದ ಜುಲೈ 18ರಂದು ರಾಜ್ಯದಾದ್ಯಂತ ಎಸ್. ಎಫ್. ಐ. ಶಾಖೆಗಳು ಹೆಚ್ಚಿನ ಪ್ರಮಾಣದಲ್ಲಿ ಸಹಿ ಸಂಗ್ರಹಿಸಲು ರಾಜ್ಯ ಸಮಿತಿ ಕರೆ ನೀಡಿದೆ,

ರಾಷ್ಟ್ರೀಯ ಐಕ್ಯತಾ ಸಮಾವೇಶ :

ಅಸ್ಸಾಂನಲ್ಲಿ ಅವ್ಯಾಹತವಾಗಿ ಮುಂದುವರಿದಿರುವ ಪ್ರತ್ಯೇಕತಾವಾದಿಗಳ ಹಿಂಸಾಚಾರ, ಪಂಜಾಬ್‌ನಲ್ಲಿ ಭುಗಿಲೆದ್ದಿರುವ ಖಲಿಸ್ತಾನ್ ಬೇಡಿಕೆಯ ಚಳುವಳಿಗಳ ಹಿನ್ನೆಲೆಯಲ್ಲಿ ಎಸ್.ಎಫ್.ಐ. ಇತರೆ ವಿದ್ಯಾರ್ಥಿ ಯುವಜನ ಸಂಘಟನೆಗಳೊಂದಿಗೆ ಸೇರಿ ಆಗಸ್ಟ್ 13 ರಂದು ನವದೆಹಲಿಯಲ್ಲಿ "ರಾಷ್ಟ್ರೀಯ ಐಕ್ಯತಾ ಸಮಾವೇಶವೊಂದನ್ನು ನಡೆಸುತ್ತಿದೆ.

ವೈದ್ಯಕೀಯ ವಿದ್ಯಾರ್ಥಿಗಳ ಸಮಾವೇಶ :

"ವೈದ್ಯಕೀಯ ವಿದ್ಯಾರ್ಥಿಗಳ ಸಮಸ್ಯೆಗಳು ಮತ್ತು ಭಾರತ ಸರ್ಕಾರದ ಆರೋಗ್ಯ ನೀತಿಯ ಕುರಿತು ಚರ್ಚಿಸಲು ಜುಲೈ 31 ರಿಂದ ಆಗಸ್ಟ್ 2ರ ವರೆಗೆ ಮಧ್ಯಪ್ರದೇಶದ ಗ್ವಾಲಿಯರ್‌ನಲ್ಲಿ ರಾಷ್ಟ್ರಮಟ್ಟದ ವೈದ್ಯಕೀಯ ವಿದ್ಯಾರ್ಥಿಗಳ ಸಮಾವೇಶವೊಂದನ್ನು ಎಸ್.ಎಫ್.ಐ. ಕೇಂದ್ರ ಸಮಿತಿಯು ನಡೆಸುತ್ತಿದ್ದೆ, ಇದೇ ಸಂದರ್ಭದಲ್ಲಿ ಕೇಂದ್ರ ಸಮಿತಿಯ ಮುಂದಿನ ಸಭೆಯು ಜರುಗಲಿದೆ.

ರೂ. ಒಂದು ಲಕ್ಷ ಪಾರ್ಟಿ ನಿಧಿಗೆ ಕರೆ

ಇಂದಿನ ರಾಜ್ಯದ ರಾಜಕೀಯ ಪರಿಸ್ಥಿತಿಯಲ್ಲಿ ರೈತ, ಕಾರ್ಮಿಕ ವಿದ್ಯಾರ್ಥಿ, ಯುವಜನತೆ ಹಾಗೆಯೇ ಮಧ್ಯಮ ವರ್ಗದ ಮತ್ತು ಎಲ್ಲಾ ಜನತೆ ಎದುರಿಸುತ್ತಿರುವ ಸಮಸ್ಯೆಗಳ ಪರಿಹಾರಕ್ಕಾಗಿ ಹೋರಾಟಗಳನ್ನು ಸಂಘಟಿಸಿ, ಯಶಸ್ವಿಗೊಳಿಸುವ ಜವಾಬ್ದಾರಿಯನ್ನು ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಾರ್ಟಿ ಹೊರಬೇಕಾಗಿದೆ. ಅಂಥ ಚರಿತ್ರಾರ್ಹ ಜವಾಬ್ದಾರಿಯನ್ನು ಅದು ಹೊತ್ತಿದೆ. ರಾಜ್ಯಾದ್ಯಂತ ಹಲವಾರು ಕಡೆಗಳಲ್ಲಿ ಎಲ್ಲ ವಿಭಾಗಗಳ ಹೋರಾಟ ನಡೆಯುತ್ತಿದೆ. ಅದನ್ನು ಇನ್ನೂ ವಿಶಾಲಗೊಳಿಸಬೇಕಾಗಿದೆ. ಹೊಸ ಕ್ಷೇತ್ರಗಳಲ್ಲಿ ಸಂಘಟನೆ ಕಟ್ಟಬೇಕಾಗಿದೆ, ಚಳುವಳಿ ನಡೆಸಬೇಕಾಗಿದೆ.

ಮೊನ್ನೆ ನಡೆದ ವಿಧಾನಸಭೆಯ ಚುನಾವಣೆಯ ನಂತರ ಈ ಜವಾಬ್ದಾರಿ ಮತ್ತಷ್ಟು ಹೆಚ್ಚಾಗಿದೆ.

ಈ ರೀತಿ ರಾಜ್ಯಾದ್ಯಂತ ನಮ್ಮ ಚಳುವಳಿ ವಿಶಾಲಗೊಳ್ಳುತ್ತಿರುವಾಗ ಅವುಗಳಿಗೆ ಮಾರ್ಗದರ್ಶನ ನೀಡಲು ಮುಖಂಡತ್ವ ಅತ್ಯಗತ್ಯ. ಅದಕ್ಕಾಗಿ ಪೂರ್ಣ ಕಾಲದ, ಅರ್ಧ ಕಾಲದ ಕಾರ್ಯಕರ್ತರನ್ನು ನೇಮಿಸಿ, ಪೋಷಿಸಿ, ಪಳಗಿಸಿ ಉಳಿಸಿಕೊಳ್ಳುವುದು ಅಷ್ಟೇ ಮಹತ್ವದ್ದಾಗಿದೆ.

ಈ ಕಾರ್ಯಗಳು ಸರಿಯಾಗಿ ನಡೆಸಲ್ಪಡಬೇಕಾದರೆ ಹಣ ಅತ್ಯಗತ್ಯ. ರಾಜ್ಯಕಮಿಟಿಯ ಆರ್ಥಿಕ ಪರಿಸ್ಥಿತಿ ಅತಿ ಗಂಭೀರವಾಗಿದೆ, ಇದರಿಂದಾಗಿ ದೈನಂದಿನ ಚಟುವಟಿಕೆಗಳಿಗೂ, ಚಳುವಳಿಯ ಮುಂದುವರಿಕೆಗೂ ಅಡ್ಡಿಯಾಗುತ್ತಿದೆ.

ಆದ್ದರಿಂದ ಈ ವರ್ಷ ಪಾರ್ಟಿಗೆ ಒಂದು ಲಕ್ಷ ನಿಧಿ ಕೂಡಿಸಬೇಕೆಂದು ನಿರ್ಧರಿಸಿದ್ದೇವೆ. ಈ ನಿಧಿಯನ್ನು ಪೂರ್ಣಗೊಳಿಸಲು ಎಲ್ಲ ರೈತರೂ, ಕಾರ್ಮಿಕರೂ, ನೌಕರರೂ, ವಿದ್ಯಾರ್ಥಿ-ಯುವ ಜನತೆಯೂ, ಮಹಿಳೆಯರೂ, ಮಧ್ಯಮವರ್ಗದವರಲ್ಲದೆ, ಎಲ್ಲ ಪ್ರಜಾಪ್ರಭುತ್ವವಾದಿ ಜನರು ಉದಾರ ಹಸ್ತದಿಂದ ಸಹಾಯ ಮಾಡಬೇಕೆಂದು ವಿನಂತಿ.

ಪಿ. ರಾಮಚಂದ್ರರಾವ್
ಕಾರ್ಯದರ್ಶಿ
ಕರ್ನಾಟಕ ರಾಜ್ಯ ಸಮಿತಿ ಸಿಪಿಐ(ಎಂ)

ಪಾರ್ಟಿ ನಿಧಿಗೆ ಕೊಡುಗೆ

ಶ್ರೀ ಪೈ. ಅಡ್ವೊಕೇಟ್	ರೂ. 1000
ಶ್ರೀ ರಾವ್, ಅಡ್ವೊಕೇಟ್	500
ಬಿಜಾಪುರ ಜಿಲ್ಲಾ ಸಮಿತಿ ಸಿಪಿಐ(ಎಂ)	300

ವಿದ್ಯಾರ್ಥಿಗಳಿಗೆ ಕಿರುಕುಳ SFI ನಿಂದ ಹೋರಾಟ

ರಾಯಚೂರು ತಾಲ್ಲೂಕಿನ ಇಡಪನೂರಿನಲ್ಲಿರುವ ಹೈಸ್ಕೂಲಿನ ಬಿ. ಸಿ. ಹಾಸ್ಟೆಲಿನ ವಿದ್ಯಾರ್ಥಿಗಳು ಸೂಪರಿಂಟೆಂಡೆಂಟರಿಂದ ತಮಗಾಗುತ್ತಿರುವ ಕಿರುಕುಳಗಳ ವಿರುದ್ಧ ಎಸ್. ಎಫ್. ಐ.ನ ಅಡಿಯಲ್ಲಿ ಸಂಘಟಿತರಾಗಿ ಹೋರಾಟ ನಡೆಸುತ್ತಿದ್ದಾರೆ. ಈ ಹಾಸ್ಟೆಲಿನ ಅಧಿಕಾರಿ ಅಲ್ಲಿನ ವಿದ್ಯಾರ್ಥಿಗಳಿಗೆ ಒಣಗಿದ ರೊಟ್ಟಿ ಮತ್ತು ಕಾರದ ಪುಡಿಯನ್ನು ಕೊಡುತ್ತಿದ್ದುದರ ಪರಿಣಾಮವಾಗಿ ಅಲ್ಲಿನ ವಿದ್ಯಾರ್ಥಿಗಳು ಅಸ್ವಸ್ಥರಾದರು. ಆದರೂ ಅಧಿಕಾರಿಯ ಮೇಲಿನ ಅಂಜಿಕೆಯಿಂದ ಅವರು ಸುಮ್ಮನಿದ್ದರೂ ಕಿರುಕುಳ ಅಸಹನೀಯವಾದಾಗ ವಿದ್ಯಾರ್ಥಿಗಳು ಪ್ರತಿಭಟಿಸಲೇಬೇಕಾಯಿತು.

4-7-83ರಂದು ಬಿ. ಡಿ. ಓ. ರವರಿಗೆ ಮನವಿ ಪತ್ರ ಅರ್ಪಿಸಿದಾಗ ಮರುದಿನ ಬಿ.ಡಿ.ಓ.ರವರು ಹಾಸ್ಟಲ್ ಇನ್‌ಸ್ಪೆಕ್ಟರ್‌ರವರನ್ನು ಮೇಲ್ಕಂಡ ಹಾಸ್ಟೆಲಿಗೆ ಕಳುಹಿಸಿದರು, ಆದರೆ ಹಾಸ್ಟೆಲಿನ ಸೂಪರಿಂಟೆಂಡೆಂಟರು ಇನ್ಸ್‌ಪೆಕ್ಟರವರ ಸಮ್ಮುಖದಲ್ಲಿಯೇ ಒಣ ರೊಟ್ಟಿ ಕಾರದ ಪುಡಿಯನ್ನು ವಿದ್ಯಾರ್ಥಿಗಳಿಗೆ ಕೊಟ್ಟರು. ಅಧಿಕಾರಿಗಳಿಗೂ ಅಂಜದ ವಿದ್ಯಾರ್ಥಿಗಳಿಗೆ ಕಂಟಕನಾಗಿರುವ ಈತನ ವಿರುದ್ಧ ಹೋರಾಟ ಮುಂದುವರಿದಿದೆ. ಸಂಬಂಧಪಟ್ಟ ಅಧಿಕಾರಿಗಳು ಕೂಡಲೇ ಸೂಕ್ತ ಕ್ರಮ ಕೈಗೊಂಡು ಪರಿಸ್ಥಿತಿಯನ್ನು ಸರಿಪಡಿಸಬೇಕೆಂದು ಒತ್ತಾಯಿಸಲಾಗಿದೆ.

ಬೆಲೆ ಏರಿಕೆಯನ್ನು ತಡೆಗಟ್ಟುವಂತೆ ಹಂಚಿನ ಮಜೂರರ ಒತ್ತಾಯ

ಸೌತ್ ಕೆನರಾ ಟೈಲ್ ವರ್ಕರ್ಸ್ ಯೂನಿಯನ್ನಿನ 40ನೇ ವಾರ್ಷಿಕ ಮಹಾಸಭೆಯು ತಾ॥ 3-7-1983 ರಂದು ಜೋಳಾರ ಆಫೀಸಿನಲ್ಲಿ ನಡೆಯಿತು. ಸಹ ಕಾರ್ಯದರ್ಶಿಯವರು ಗತವರ್ಷದ ವರದಿ ಹಾಗೂ ಲೆಕ್ಕಪತ್ರವನ್ನು ಸಭೆಯ ಮುಂದಿಟ್ಟರು.

ಬೆಲೆ ಏರಿಕೆಯನ್ನು ಸರಕಾರ ತಡೆಗಟ್ಟುವ ಕ್ರಮವಾಗಿ ಕೂಡಲೇ ನ್ಯಾಯಬೆಲೆಯಲ್ಲಿ ನಿತ್ಯೋಪಯೋಗಿ ವಸ್ತುಗಳನ್ನು ಒದಗಿಸಲು ಸರಕಾರ ವ್ಯವಸ್ಥೆ ಮಾಡದಿದ್ದರೆ ಚಳವಳಿಕ್ಕೆ ಇಳಿಯುವ ನಿರ್ಣಯವನ್ನು ಕೈಕೊಳ್ಳಲಾಯಿತು. ಸಭೆಯು ಅಂಗೀಕರಿಸಿದ ಉಳಿದ ನಿರ್ಣಯಗಳ ಪೈಕಿ ಈಗಿನ ಸರಕಾರ ಕೊಟ್ಟ ಭರವಸೆಯಂತೆ ಕನಿಷ್ಟ ವೇತನವನ್ನು ಕೂಡಲೇ ಪ್ರಕಟಿಸುವಂತೆ ಒತ್ತಾಯಿಸುವ, ಪ್ರಾವಿಡೆಂಟ್ ಫಂಡಿನ ಕಛೇರಿಯಲ್ಲಿ ಮತ್ತು ಇ. ಎಸ್. ಐ. ಯಲ್ಲಿ ಆಗುವ ಅನ್ಯಾಯಗಳ ವಿರುದ್ಧ ನಿರ್ಣಯಗಳನ್ನು ಅಂಗೀಕರಿಸಲಾಯಿತು. ಜಗತ್ತಿನಲ್ಲಿ ಸಾಮ್ರಾಜ್ಯಶಾಹಿಗಳ ಯುದ್ಧ ಪ್ರಚೋದನೆ ಅದನ್ನು ತಡೆಗಟ್ಟಲು ಸಮಾಜವಾದಿ ರಾಷ್ಟ್ರಗಳು ಹಾಗೂ ಜಗತ್ತಿನ ಮಜೂರ ವರ್ಗ ನಡೆಸುತ್ತಿರುವ ಹೋರಾಟದ ಬಗ್ಗೆ ವಿವರಿಸಿದ ಕಾ॥ ಬಿ. ಮಾಧವರು ಯುದ್ಧ ವಿರುದ್ಧ ಮತ್ತು ವಿಶ್ವ ಶಾಂತಿಗಾಗಿ ಈ ಚಳುವಳಿಯನ್ನು ನಡೆಸುವ ಪ್ರಾಮುಖ್ಯತೆಯನ್ನು ವಿವರಿಸಿದರು.

ಸಭೆಯಲ್ಲಿ ಮುಂದಿನ ವರ್ಷಕ್ಕೆ ಕಾ॥ ಕೆ. ಆರ್. ಶ್ರೀಯಾನ್ ಅಧ್ಯಕ್ಷರಾಗಿಯೂ, ಕಾ॥ ಬಿ. ಕೊರಗಪ್ಪ ರೈ, ಸಿ. ನಾರಾಯಣ (ಕುಂದಾಪುರ) ಮತ್ತು ಬಿ. ಮಾಧವರು ಉಪಾಧ್ಯಕ್ಷರಾಗಿಯೂ, ಕಾ॥ ಕೆ. ಮೂಸಬ್ಬ ಪ್ರಧಾನ ಕಾರ್ಯದರ್ಶಿಯಾಗಿಯೂ, ಕಾ॥ ಪಿ. ಈಶ್ವರ ಮತ್ತು ಕೆ. ಶಂಕರ ಜೊತೆ ಕಾರ್ಯದರ್ಶಿಯಾಗಿಯೂ ಕಾ॥ ಅಬ್ರಹಾಮ್ ಕರ್ಕಡ, ಕೋಶಾಧಿಕಾರಿಯಾಗಿಯೂ ಇರುವ ಆಡಳಿತ ಕಮಿಟಿಯನ್ನು ಚುನಾಯಿಸಲಾಯಿತು.

ಕಾ॥ ಕೆ. ಆರ್. ಶ್ರೀಯಾನ್ ಸಭೆಯನ್ನು ಉದ್ದೇಶಿಸಿ ಮಾತನಾಡಿ ಮಜೂರರ ಐಕ್ಯ ಹೋರಾಟದ ಪ್ರಾಮುಖ್ಯತೆಯನ್ನು ವಿವರಿಸಿದರು. ಜಿಲ್ಲಾ ರೈತ ಸಂಘದ ಕಾರ್ಯದರ್ಶಿ ಕಾ। ಯು. ಜನಾರ್ಧನ ನ್ಯಾಕರು ಸಂದೇಶವನ್ನು ಕೊಡುತ್ತಾ ರೈತ ಮಜೂರರ ಐಕ್ಯ ಹೋರಾಟದ ಬಗ್ಗೆ ವಿವರಿಸಿದರು.

ಸಭಾಧ್ಯಕ್ಷತೆಯನ್ನು ವಹಿಸಿದ ಕಾ॥ ಕೆ. ಮೂಸಬ್ಬನವರು ಜಿಲ್ಲೆಯ ಹರಿಜನ ಮಜೂರರ ಹೋರಾಟವನ್ನು ವಿವರಿಸುತ್ತಾ, ಸಂಘಟನೆಯನ್ನು ಬಲಪಡಿಸಿ ತಮ್ಮ ಕೇಳಿಕೆಗಳನ್ನು ಪಡೆಯಲು ಮುಂದಾಗಬೇಕೆಂದರು.

ಸಿ. ನಾರಾಯಣರು ಕೊನೆಯಲ್ಲಿ ಧನ್ಯವಾದಗಳನ್ನಿತ್ತರು.

ಬೆಂಗಳೂರು :

ಗಾರ್ಮೆಂಟ್ ಕಾರ್ಮಿಕರ ಪ್ರದರ್ಶನ

ಬೆಂಗಳೂರು ಡಿಸ್ಟ್ರಿಕ್ಟ್ ಗಾರ್ಮೆಂಟ್ ಕಾರ್ಮಿಕರ ಸಂಘದ ಪರವಾಗಿ 7-7-83 ರಂದು ಮಲ್ಲೇಶ್ವರಂ, 11ನೇ ಕ್ರಾಸ್‌ನಲ್ಲಿರುವ ಹಿಂದೂಜಾ ಕ್ಲೋತಿಂಗ್ ಕಾರ್ಖಾನೆ ಎದುರು ಬಹಿರಂಗ ಪ್ರದರ್ಶನ ನಡೆಸಲಾಯಿತು. ನಾರಾಯಣ್ ಎಂಬ ಕಾರ್ಮಿಕನನ್ನು ಕಾರ್ಖಾನೆಯ ಪ್ರೊಡಕ್ಷನ್ ಮ್ಯಾನೇಜರ್ ಅವಾಚ್ಯ ಶಬ್ದಗಳಲ್ಲಿ ಬೈದು ಈ ಕಾರ್ಮಿಕನ ನಡವಳಿಕೆಯು ಸರಿಯಿಲ್ಲವೆಂದು ಸಸ್ಪೆಂಡ್ ಮಾಡಿದ್ದಾರೆ. ಈ ಬಗ್ಗೆ ಸ್ಟ್ಯಾಂಡಿಂಗ್ ಆರ್ಡರ್ ಪ್ರಕಾರ ಶೋಕಾಸ್ ನೋಟಿಸ್ ಆಗಲೀ ತನಿಖೆಯಾಗಲೀ ನಡೆಸಲಿಲ್ಲ. ಕಾನೂನು ರೀತ್ಯಾ ಇದು ಅಕ್ಷಮ್ಯ. ಸಸ್ಪೆಂಡ್ ಆದ ಕಾರ್ಮಿಕನಿಗೆ ಅಮಾನತ್ತು ಭತ್ಯ ಕೂಡ ನೀಡಿಲ್ಲ.

ಈ ಕಾರ್ಮಿಕ ವಿರೋಧಿ ಧೋರಣೆಯ ವಿರುದ್ಧ ಹಿಂದುಜಾ ಕ್ಲೋತಿಂಗ್ ಕಾರ್ಖಾನೆಯ ಎದುರು ಒಂದು ಬೃಹತ್ ಪ್ರದರ್ಶನ ನಡೆಯಿತು. ಸುಮಾರು 500 ಕ್ಕಿಂತ ಹೆಚ್ಚು ಜನರು ಇದರಲ್ಲಿ ಭಾಗವಹಿಸಿದ್ದರು. ಹೆಂಗಸರೇ ಹೆಚ್ಚಿನ ಸಂಖ್ಯೆಯಲ್ಲಿದ್ದರು. ಕಾಂ॥ ಪಿ. ಕೆ. ಸುಬ್ರಮಣಿ ಕೆ. ವಿ. ಶ್ರೀನಿವಾಸನ್ ಹಾಗೂ ಆಟೋರಿಕ್ಷಾ ಸಂಘದ ಎ. ವಿ. ರಮೇಶ್ ಮತ್ತು ಹಿಂದುಜಾ ಕಂಪೆನಿಯ ಸಸ್ಪೆಂಡ್ ಆದ ಕಾರ್ಮಿಕನಾದ ಕೆ. ವಿ. ನಾಗರಾಜ ಇವರೆಲ್ಲರೂ ಕಾರ್ಮಿಕರನ್ನುದ್ದೇಶಿಸಿ ಮಾತನಾಡಿದರು.

ಈ ಅಮಾನತ್ತು ಆಗಿರುವ ಕಾರ್ಮಿಕನನ್ನು ವಾಪಸ್ಸು ತೆಗೆದುಕೊಳ್ಳದಿದ್ದರೆ ಇನ್ನು ಒಂದು ವಾರದೊಳಗಾಗಿ ತೀವ್ರ ಹೋರಾಟ ನಡೆಸುವುದಾಗಿ ಸಂಘವು ಪ್ರಕಟಿಸಿದೆ.

ಭಾರತ ಕಮ್ಯುನಿಸ್ಟ್ ಪಕ್ಷ (ಮಾರ್ಕ್ಸ್‌ವಾದಿ)

(ಶಾಸಕಾಂಗ ವಿಭಾಗ)

ತಾ. 18-6-1983

ಪ್ರಕಟಣೆ.

ಶಾಸನ ಸಭೆಯಲ್ಲಿ ನಾವು ಗಳಿಸಿರುವ ಪ್ರಾತಿನಿಧ್ಯವನ್ನು ನಮ್ಮ ಚಳುವಳಿಯನ್ನು ಮುಂದೊಯ್ಯಲು ಉಪಯೋಗಿಸಬೇಕಾಗಿದೆ. ಈ ಶಾಸನ ಸಭೆಯಲ್ಲಿ ರಾಜ್ಯದ ಪ್ರದೇಶಗಳ ಅನೇಕ ಸಮಸ್ಯೆಗಳನ್ನು ಎತ್ತುವುದರ ಮೂಲಕ, ಸರ್ಕಾರದ ಗಮನ ಸೆಳೆದು ಅವರನ್ನು ಆ ಸಮಸ್ಯೆಗಳ ಪರಿಹಾರಕ್ಕಾಗಿ ಒತ್ತಾಯಿಸುವುದರ ಮೂಲಕ ಈ ಪ್ರಯತ್ನ ಆಗಬೇಕಾಗಿದೆ. ಇದಕ್ಕಾಗಿ ನಮ್ಮ ರಾಜ್ಯಮಟ್ಟದ ಸಾಮೂಹಿಕ ಸಂಘಟನೆಗಳು ಮತ್ತು ಪಕ್ಷದ ಜಿಲ್ಲಾ ಹಾಗೂ ಪ್ರಾದೇಶಿಕ ಶಾಖೆಗಳು ತಾವು ಎದುರಿಸುತ್ತಿರುವ ತುರ್ತು ಸಮಸ್ಯೆಗಳನ್ನು ಶಾಸಕಾಂಗ ವಿಭಾಗಕ್ಕೆ ಕಳುಹಿಸಬೇಕೆಂದು ವಿನಂತಿಸಲಾಗಿದೆ. ರಾಜ್ಯ ಮಟ್ಟದಲ್ಲಿ ಸರ್ಕಾರದೊಂದಿಗೆ ಚರ್ಚಿಸಬೇಕಾದ ಅವಶ್ಯಕತೆ ಇರುವ ಮತ್ತು ವಿಧಾನಸಭೆಯಲ್ಲಿ ಚರ್ಚಿಸುವ ಅವಶ್ಯಕತೆಯಿರುವ ಸಮಸ್ಯೆಗಳನ್ನಷ್ಟೆ ಕಳುಹಿಸಬೇಕೆಂದು ವಿನಂತಿ.

ಸಮಸ್ಯೆಗಳ ಬಗ್ಗೆ ವಿವರವಾದ ಮಾಹಿತಿಯನ್ನು ಕೂಡ ಕೊಡಬೇಕು.

ಯಾವ ಊರು, ತಾಲ್ಲೂಕಿನ ಸಮಸ್ಯೆ, ಅದರಿಂದ ತೊಂದರೆಗೊಳಗಾದ ಜನ, ಹಳ್ಳಿಗಳು, ಒಕ್ಕಲುತನದ ಸಮಸ್ಯೆಯಾದರೆ ವಿಸ್ತೀರ್ಣ ಈ ಸಮಸ್ಯೆಯನ್ನು ಬಗೆಹರಿಸುವುದಕ್ಕೆ ಈಗಾಗಲೇ ಮಾಡಿರುವ ಪ್ರಯತ್ನ, ಅದಕ್ಕೆ ಅಧಿಕಾರಿಗಳಿಂದ ಬಂದ ಪ್ರತಿಕ್ರಿಯೆ, ಅವರು ತಳೆದ ನಿಲುವು, ಸದ್ಯದ ಸ್ಥಿತಿ.

ಈ ವಿವರಗಳನ್ನು ನೀಡಿ ಸಹಕರಿಸುತ್ತೀರೆಂದು ನಂಬಿದ್ದೇನೆ.

ಪಿ. ರಾಮಚಂದ್ರರಾವ್,

ವಿಳಾಸ :
ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷದ
ಶಾಸಕಾಂಗ ವಿಭಾಗ
ಕೊಠಡಿ ನಂ. 233, ಶಾಸಕರ ಭವನ
ಬೆಂಗಳೂರು - 560 001.

ಪುರಸಭೆ, ನಗರಸಭೆ ಚುನಾವಣೆ

(1ನೇ ಪುಟದಿಂದ)

ಆಯಾ ರಾಜಕೀಯ ಪಕ್ಷ ತನ್ನ ನಿರ್ದಿಷ್ಟ ಕಾರ್ಯಕ್ರಮದ ಆಧಾರದಲ್ಲಿ ಸ್ಥಳೀಯ ಸಂಸ್ಥೆಗಳಿಗೆ ಸ್ಪರ್ಧಿಸಬೇಕೆಂದು ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಾರ್ಟಿಯ ನಿಲುವಾಗಿದೆ. ಯಾಕೆಂದರೆ ಸ್ಥಳೀಯ ಸಂಸ್ಥೆಗಳು ಜನರ ನೇರ ಸಂಪರ್ಕ ಹೊಂದಿರುತ್ತವೆ. ಆದ್ದರಿಂದ ಜನಜೀವನಕ್ಕೆ ಅತ್ಯಾವಶ್ಯಕ ಸೌಕರ್ಯಗಳನ್ನೊದಗಿಸುವ ಜವಾಬ್ದಾರಿ ನಗರಸಭೆಗಳದ್ದಾಗಿರುವಾಗ, ಅವುಗಳನ್ನೆಲ್ಲ ಒದಗಿಸಬೇಕಾದರೆ ನಿಷ್ಠಾವಂತ ಸದಸ್ಯರೂ, ಆಡಳಿತೆಯೂ ಅತ್ಯಗತ್ಯ. ಆದ್ದರಿಂದ ಸಮಸ್ಯೆಗಳ ಆಧಾರದಲ್ಲಿ ನಿರ್ದಿಷ್ಟ ಕಾರ್ಯಕ್ರಮವೂ, ಆ ಕಾರ್ಯಕ್ರಮವನ್ನು ಜಾರಿಯಲ್ಲಿ ತರಲು ಅಧಿಕಾರವೂ ಬೇಕು.

ಈಗ ನಡೆಯಲಿರುವ ನಗರಸಭೆಗಳ ಚುನಾವಣೆಗಳಲ್ಲಿ ಬಹಳಷ್ಟು ಕಡೆ ಕಾಂಗ್ರೆಸ್ಸಿನಂತೆಯೇ ಜನತಾ ಪಕ್ಷ ತಮ್ಮ ಉಮೇದುವಾರರನ್ನು ಪಕ್ಷದ ಹೆಸರಿನಲ್ಲಿ ಸ್ಪರ್ಧೆಗೆ ಇಳಿಸಿರುವುದಿಲ್ಲ. ಇದರಿಂದಾಗಿ ನಗರಸಭೆಗಳ ಆಡಳಿತ ಅಸ್ಥಿರಗೊಳ್ಳುವುದಷ್ಟೇ ಅಲ್ಲ, ಆರಿಸಿ ಬಂದ ಸದಸ್ಯರುಗಳೂ ಭ್ರಷ್ಟಾಚಾರಕ್ಕೆ ಬಲಿಯಾಗುವಂತೆ ಮಾಡುತ್ತದೆ. ಆದರೆ ಕಾರ್ಪೊರೇಶನ್ ಚುನಾವಣೆಗಳಲ್ಲಿ ಮಾತ್ರ ಜನತಾ ಪಕ್ಷ ನೇರವಾಗಿ ಸ್ಪರ್ಧಿಸಲು ನಿರ್ಧರಿಸಿರುವುದು ಸ್ವಾಗತಾರ್ಹ.

ಹೋದ ರಾಜ್ಯಸಭೆ ಚುನಾವಣೆಯಂತೆಯೇ ಕಾರ್ಪೊರೇಶನ್ ಚುನಾವಣೆಗಳಲ್ಲಿ ಜನತಾ ಪಕ್ಷ, ಸಿ.ಪಿ.ಐ, ಸಿ. ಪಿ. ಐ. (ಎಂ.) ಪಕ್ಷಗಳು ಹೊಂದಾಣಿಕೆಗೆ ಬರುವುದು ಅತ್ಯಗತ್ಯ. ರಾಜ್ಯದಲ್ಲುಂಟಾಗಿರುವ ಹೊಸ ರಾಜಕೀಯ ವಾತಾವರಣವನ್ನು ಸರಿಯಾಗಿ ಉಪಯೋಗಿಸಿಕೊಂಡು ನಗರಸಭೆ, ಕಾರ್ಪೊರೇಶನ್ ಪ್ರದೇಶಗಳಲ್ಲಿ ಜನರ ಆಶೋತ್ತರಗಳನ್ನು ಪೂರೈಸಬೇಕಾದರೆ ಈ ಮೂರು ಪಕ್ಷಗಳ ಸಂಯುಕ್ತ ರಂಗ ಅಧಿಕಾರದಲ್ಲಿ ಬರುವುದು ಅತ್ಯಗತ್ಯ.

ಈಗಿರುವ ಬಹುತೇಕ ನಗರಸಭೆ, ಕಾರ್ಪೊರೇಶನ್‌ಗಳು ಭ್ರಷ್ಟಾಚಾರ. ಸ್ವಜನ ಪಕ್ಷಪಾತ, ಅವ್ಯವಹಾರಗಳ ನೆಲೆಬೀಡಾಗಿವೆ. ಅವುಗಳನ್ನೆಲ್ಲ ಶುದ್ಧೀಕರಿಸಬೇಕು. ನಗರವಾಸಿಗಳಿಗೆ ಒಳ್ಳೆಯ ಆಡಳಿತ ನೀಡಬೇಕು, ಅವರ ಸಮಸ್ಯೆಗಳನ್ನು ಪರಿಹರಿಸಬೇಕು. ಇದೆಲ್ಲ ಆಗಬೇಕಾದರೆ ಈ ಮೂರು ರಾಜಕೀಯ ಪಕ್ಷಗಳು ಅಧಿಕಾರಕ್ಕೆ ಬಂದರೆ ಮಾತ್ರ ಸಾಧ್ಯ. ಆದ್ದರಿಂದ ಪುರಸಭೆ, ಕಾರ್ಪೊರೇಶನ್ ಚುನಾವಣೆಗಳಲ್ಲಿ ಜನತಾ, ಸಿ. ಪಿ. ಐ, ಸಿ. ಪಿ. ಐ. (ಎಂ.) ಪಕ್ಷಗಳ ಉಮೇದುವಾರರನ್ನು ಬಹುಮತದಿಂದ ಆರಿಸಿ ತರಬೇಕೆಂದು ವಿನಂತಿ.

Printed & Published by P. Ramachandra Rao by him on behalf of the Communist Party of India (Marxist) Karnataka State Committee L-56 K. V. Temple Street Sultanpet, Bangalore 560053, Editorial and managerial office : L-56, K. V. Temple Street, Sultanpet, B-53. Phone : 2415
Printed at Karnataka Pressmen Associates (P) Limited, 54/1, K. R. Road, Bangalore-4 Editor: P. RAMACHANDRARAO